# ನೇಸರು

ತಿಂಗಳೋಲೆ

₹ 5/-
PAGES 24
JULY 2019 Nesaru Tingalole Vol. XXXVII - 7



ಎಸ್. ಜಿ. ವಾಸುದೇವ – ಕನ್ನಡದ ಹೆಮ್ಮೆಯ ಚಿತ್ರಕಾರ

ಮೈಸೂರು ಅಸೋಸಿಯೇಷನ್ ಮುಂಬೈ
THE MYSORE ASSOCIATION, BOMBAY
393, Bhau Daji Road, Matunga, Mumbai - 400 019. | Tel.: 2402 4647, 2403 7065
Email : mysoreassociation.mumbai@gmail.com

# ಸೋಜಿಗದ ಭರತನಾಟ್ಯ ಪ್ರದರ್ಶನ



ಇದೇ ಕಳೆದ ಜೂನ್ ತಿಂಗಳ 28 ರ ಶುಕ್ರವಾರ ಸಂಜೆ ಬೆಂಗಳೂರಿನ ಹೆಸರಾಂತ ಭರತನಾಟ್ಯಗುರು ಶ್ರೀಮತಿ ಮಮತಾ ಕಾರಂತ ಅವರು ತಮ್ಮ ನಾಟ್ಯ ತಂಡದೊಂದಿಗೆ ಮೈಸೂರು ಅಸೋಸಿಯೇಷನ್ನಿನ ಇಂದಿನ ಜಾಗತೀಕರಣದ ಒತ್ತಡದಿಂದ ನಮ್ಮ ಪ್ರಕೃತಿಗೆ ಅಂದರೆ ನಮ್ಮ ಭೂಮಿತಾಯಿಗೆ ನಾವು ತೋರುತ್ತಿರುವ ಅಲಕ್ಷ್ಯದಿಂದಾಗುತ್ತಿರುವ ಅನಾಹುತಗಳಿಂದ ಮುಂದೊದಗ ಬಹುದಾದ ಪ್ರಕೃತಿಯ ನಾಶ ಮತ್ತು ಅದರ ಪರಿಣಾಮಗಳಾದ ಅತೀ ಬಿಸಿಲು, ಅನಾವೃಷ್ಟಿ, ಸಮುದ್ರದ ಮೇಲೇರುವಿಕೆ, ಚಂಡ ಮಾರುತಗಳು, ಮುಂತಾದವುಗಳನ್ನು ತಮ್ಮ ಭರತನಾಟ್ಯದಲ್ಲಿ ಚತುರತೆಯಿಂದ ಪರಿಣಾಮ ಕಾರಿಯಾಗಿ ನಮ್ಮ ಮುಂದಿಟ್ಟು ಈ ಅನಾಹುತಗಳಿಂದ ಪಾರಾಗಲು ನಮ್ಮ ಪ್ರಕರಣಗಳಲ್ಲಿ ಹೇಳಿರುವಂತೆ ಮಹಾವಿಷ್ಣುವು ದಶಾವತಾರಗಳನ್ನುಈ



ಭೂಮಿಯನ್ನು ಅದರ ಮೇಲೆ ವಾಸಿಸುತ್ತಿರುವ ನಮ್ಮನ್ನು ರಕ್ಷಿಸುವ ಸಾಧ್ಯತೆ ಇಂದು ಕಂಡು ಬಾರದಿರುವುದರಿಂದ ಮತ್ತು ಈ ಎಲ್ಲ ಅನಾಹುತಗಳಿಗೂ ನಾವೇ ಕಾರಣವಾಗಿರುವುದರಿಂದ ಈಗಲೇ ಎಚ್ಚತ್ತು ನಾವು ಹಿಡಿದಿರುವ ಈ ವಿನಾಶಕಾರೀ ದಾರಿಯನ್ನು ಬಿಟ್ಟು ಪ್ರಕೃತಿಯನ್ನು ಮೊದಲಿನಂತೆ "ಸಸ್ಯಶಾಲಿನಿ"ಯನ್ನಾಗಿಸುವ ದಾರಿಯಲ್ಲಿ ನಡೆದು ನಮ್ಮ ಈ ಭೂಮಿಯನ್ನೂ ಅಂತೆಯೇ ನಮ್ಮನ್ನೂ ರಕ್ಷಿಸಿಕೊಳ್ಳುವಂತೆ ನಾವೇ ಕಾರ್ಯೋನ್ಮುಖರಾಗಬೇಕೆಂಬ ಸುಸಂದೇಶವನ್ನು ತಮ್ಮ ಭರತನಾಟ್ಯದ ಮೂಲಕ ನಿಚ್ಚಳವಾಗಿ ನಮ್ಮ ಮುಂದೆ ಮೂಡಿಸುವುದರಲ್ಲಿ ಯಶಸ್ವಿಯಾದರು. ಒಳ್ಳೆಯ ಸಮೂಹ ನೃತ್ಯ ಮತ್ತು ಭರತನಾಟ್ಯದ ಎಲ್ಲ ಅಂಗಗಳನ್ನೊಳಗೊಂಡ ಅವರ ಚತುರತೆ ಎಲ್ಲರ ಮನವನ್ನು ಗೆದ್ದಿತು. ಅದಕ್ಕಾಗಿ ನಾವು ಶ್ರೀಮತಿ ಮಮತಾ ಕಾರಂತರ ತಂಡವನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. ಕಾಕತಾಳಿಯವಾಗಿ ಅವರು ಬಂದ ದಿನದಿಂದಲೇ ಮುಂಬೈ ವಾಸಿಗರು ಕಾತರದಿಂದ ಕಾಯುತ್ತಿದ್ದು ಮಳೆ ಬಂದು ಕಾರ್ಯಕ್ರಮಕ್ಕೆ ಬರಲಿದ್ದ ನಾಟ್ಯಾಸಕ್ತರಿಗೆ ತೊಂದರೆಯನ್ನುಂಟು ಮಾಡಿದರೂ ಮಳೆ ಬಂದಿದ್ದೇ ನಾಟ್ಯದ ಸಂದೇಶವನ್ನೇ ಹೊತ್ತುತಂದಿತ್ತೆಂಬ ಸಮಾಧಾನ ನಮಗಾಯಿತು. ಅವರ ಸಂಗಡಿಗರು ತಮ್ಮ ಕಲೆಯ ಚತುರತೆಯಿಂದ ನೋಡುಗರ ಮೆಚ್ಚುಗೆಯನ್ನು ಗಿಟ್ಟಿಸಿದರು.

ಗೌ. ಸಂಪಾದಕರು :

**ಡಾ. ಜ್ಯೋತಿ ಸತೀಶ್**

❖ ❖❖

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

**ನೀಲಕಂಠ**

❖ ❖❖

ಬೆಂಗಳೂರು ಪ್ರತಿನಿಧಿ :

**ಎಂ.ಎ.ಎನ್. ಪ್ರಸಾದ್**

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. ***- ಸಂ***

The views expressed by the contributors in this journal are theirs and not of the Association and the Association is not in anyway responsible for the same.

*- Ed.*

❖ ❖❖

ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್

393, ಭಾವು ದಾಜಿ ರಸ್ತೆ,

ಮಾಟುಂಗ,

ಮುಂಬಯಿ-400 019.

✆ 24024647 / 2403 7065

Email :
mysoreassociation.mumbai@gmail.com

Website :
www.mysoreassociation.in

# ಸಂಪಾದಕೀಯ

**ನೇಸರು**

**ತಿಂಗಳೋಲೆ**

**ಸಂಪುಟ** 37 | **ಜುಲಾಯಿ** 2019 | **ಸಂಚಿಕೆ** 7

ಹಿಂದೆ ಅವಿಭಕ್ತ ಕುಟುಂಬ ಪದ್ಧತಿ ರೂಢಿಯಲ್ಲಿದ್ದಿತ್ತು. ಒಂದೇ ಕುಟುಂದ ಎಲ್ಲ ಸದಸ್ಯರು ಒಂದೇ ಸೂರಿನಡಿ ಬದುಕುತ್ತಿದ್ದರು. ಸಂಸಾರದಲ್ಲಿ ಯಾರಿಗಾದರೂ ಏನಾದರೂ ಸಮಸ್ಯೆಯುಂಟಾದಾಗ ಎಲ್ಲರೂ ಅದು ತಮ್ಮದೇ ಸಮಸ್ಯೆ ಅನ್ನೋ ರೀತಿಯಲ್ಲಿ ಪರಿಹರಿಸಿ ಕೊಳ್ಳುತ್ತಿದ್ದರು. ಮನೆಗೊಬ್ಬ ಯಜಮಾನನಿರುತ್ತಿದ್ದ. ಅವನ ಛತ್ರಛಾಯೆಯಡಿ ಎಲ್ಲರೂ ಸುರಕ್ಷಿತ ಅನುಭವವನ್ನು ಪಡೆಯುತ್ತಿದ್ದರು. ಅವಿಭಕ್ತ ಕುಟುಂಬದಲ್ಲಿ ತೊಂದರೆಗಳಿರುತ್ತಿರಲಿಲ್ಲ ಎಂದು ಹೇಳಬರುವುದಿಲ್ಲ. ಒಮ್ಮೊಮ್ಮೆ ಪರಿವಾರದ ಮಧ್ಯೆ ವೈಮನಸ್ಸು ಶುರುವಾದರು ಅದು ಜಾಸ್ತಿ ಸಮಯ ಉಳಿಯುತ್ತಿರಲಿಲ್ಲ. ಹೇಗೂ ಬೆಳಿಗ್ಗೆ ಎದ್ದು ಅವರದ್ದೇ ಮುಖ ನೋಡಬೇಕು. ಎಷ್ಟು ದಿನ ಅಂತ ಮುಖವೂದಿಸಿಕೊಂಡು ಇರೋದು. ನಮ್ಮ ಕಷ್ಟಕಾಲದಲ್ಲಿ ಆಗುವವರು ಅವರೇ. ಸಂಸಾರವೆಂದ ಮೇಲೆ ಒಂದು ವಿಷಯ ಬರುತ್ತೆ, ಹೋಗುತ್ತೆ. ಚಿಕ್ಕಚಿಕ್ಕ ಸಮಸ್ಯೆಗಳನ್ನು ದೊಡ್ಡದು ಮಾಡದೆ, ಅಲ್ಲಿಯೇ ನಿಲ್ಲಿಸಿ, ನಿನ್ನೆಆದದ್ದನ್ನು ನಿನ್ನೆಗೆ ಮರೆತು, ಹೊಂದಾಣಿಕೆ ಮಾಡಿಕೊಂಡು ಬದುಕುವ ಕಲೆ ಅವರಲ್ಲಿ ರೂಢಿಗತವಾಗಿರುತ್ತದೆ. ಎಷ್ಟೇ ಮನಸ್ತಾಪಗಳಿದ್ದರೂ ಕಷ್ಟ ಬಂದಾಗ ಎಲ್ಲರೂ ಸೇರಿ ಎದುರಿಸುತ್ತಿದ್ದರು. ಇಂದು ಅವಿಭಕ್ತ ಕುಟುಂಬಗಳು ಮರೆಯಾಗಿ ಎಲ್ಲೆಡೆ ವಿಭಕ್ತ ಕುಟುಂಬಗಳು ತಲೆಯೆತ್ತುತ್ತಿವೆ. ತಮ್ಮತಮ್ಮ ಮಕ್ಕಳೊಂದಿಗೆ ಬೇರೇಯೇ ಸಂಸಾರ ಹೂಡುವುದರಲ್ಲಿ ರುಚಿ ತೋರಿಸಿದ್ದರಿಂದ ಅವಿಭಕ್ತ ಕುಟುಂಬಗಳು ಕಾಣಸಿಗುತ್ತಿಲ್ಲ. ತಮ್ಮ ಸಮಸ್ಯೆಗಳನ್ನು ಯಾರೊಂದಿಗೂ ಹೇಳಿಕೊಳ್ಳದೆ ಹಲ್ಲುಕಚ್ಚಿಕೊಂಡು ಒಬ್ಬರೇ ಎದುರಿಸುವ ಸಾಹಸ ಕೆಲಸ ಮಾಡುತ್ತಿದ್ದಾರೆ. ತಮ್ಮ ಕಷ್ಟ ಸುಖಕ್ಕೆ ಕುಟುಂಬದ ಇತರ ಸದಸ್ಯರ ಸಹಾಯವನ್ನು ನಿರೀಕ್ಷಿಸುವ ಹಾಗಿಲ್ಲ. ಅವಿಭಕ್ತ ಕುಟುಂಬದಲ್ಲಿ ತಮಗೆ ಏನಕ್ಕೂ ಸ್ವಾತಂತ್ರ್ಯವಿಲ್ಲ. ತಮ್ಮದೇ ಪರಿವಾರವಿದ್ದರೆ ನಮ್ಮ ಮನಸ್ಸಿಗೆ ಬಂದ ಹಾಗೆ ಸ್ವೇಚ್ಛೆಯಿಂದ ಜೀವನ ಸಾಗಿಸಬಹುದು ಅಂತ ಏನೇನೋ ಕಲ್ಪನೆಗಳನ್ನು ಹೊತ್ತುಕೊಂಡು ತಮ್ಮ ಕುಟುಂಬ ಸದಸ್ಯರಿಂದ ಬೇರೆಯಾಗುತ್ತಾರೆ. ಸಮಸ್ಯೆಗಳು ಬಂದಾಗ ಅವರ ದೃಢವಾದ ಮನೋಬಲದಲ್ಲಿ ತಳಮಳವಾದರೂ, ಈಗ ಯಾವ ಮುಖ ಇಟ್ಟುಕೊಂಡು ತಮ್ಮ ಕುಟುಂಬ ಸದಸ್ಯರ ಬಳಿ ಹೋಗಲಿ ಎನ್ನುವ ಕಸಿವಿಸಿಯಲ್ಲಿ ಜೀವನ ಸಾಗಿ ಹೋಗುತ್ತದೆ.

ಇನ್ನು ಪ್ರಸಕ್ತ ವರ್ತಮಾನದ ಬಗ್ಗೆ ಹೇಳುವುದಾದರೆ, ವಿಭಕ್ತ ಕುಟುಂಬದಲ್ಲು ಒಡಕುಗಳು ಉಂಟಾಗುವುದನ್ನು ಕಾಣಬಹುದು. ನಾವಿಬ್ಬರು, ನಮಗಿಬ್ಬರು ಅಥವಾ ನಾವಿಬ್ಬರು ನಮಗೊಬ್ಬಳು/ನು ಅನ್ನುವ ಮನೋಭಾವ. ದಿನನಿತ್ಯ ಆಫೀಸಿನ ಕೆಲಸದ ನಿಮಿತ್ತ ಟ್ರೈನಿನಲ್ಲಿ ಓಡಾಡುವಾಗ ನಮ್ಮ ಅಕ್ಕಪಕ್ಕದಲ್ಲಿ ಏನಾಗುತ್ತಿದೆ ಅನ್ನುವುದರ ಅರಿವು ನಮಗಾಗುತ್ತದೆ. ಅದರಲ್ಲೂ ಲೇಡಿಸ್ ಡಬ್ಬ, ಹೆಣ್ಣು ಮಕ್ಕಳಿಗೆ ತಮ್ಮ ಸಮಸ್ಯೆಗಳನ್ನು ಹಂಚಿಕೊಳ್ಳುವ ವೇದಿಕೆ ಇದ್ದ ಹಾಗೆ. ತಮ್ಮ ಸಹಪ್ರವಾಸಿಯೊಂದಿಗೆ ತಮ್ಮ ದುಃಖ ದುಮ್ಮಾನಗಳನ್ನು ಆಗಾಗ್ಗೆ ಹಂಚಿಕೊಳ್ಳುವುದನ್ನು ಕೇಳುತ್ತಾ ಕುಳಿತರೆ, ಪ್ರಯಾಣದ ಆಯಾಸದ ಅರಿವೇ ಆಗುವುದಿಲ್ಲ. ನಾನು ಇವತ್ತು ನನ್ನ ಅತ್ತೆಗೆ ಹೀಗೆ ಹೇಳಿದೆ, ಆ ಹೆಂಗಸು ಹೀಗೆ ಹೇಳಿತು. ನಾನು ಬಿಡುವವಳೆ, ಸರಿ ಹೇಳಿದೆ. ಟಿಟ್ ಫಾರ್‌ಟ್ಯಾಟ್, ಜೈಸೆ ಕೊ ತೈಸಾ ಎನ್ನುವ ಅವರ ರಣನೀತಿಗಳು. ಅತ್ತೆ ಸುಮ್ಮನಾದರೆ ಅವರಿಗೆ ವಿಜಯಿಯಾದೆ ಅನ್ನೋ ಭಾವ. ಯಾವುದೋ ರಾಜ್ಯಗೆದ್ದ ಖುಷಿ. ಈಕೆಯ ತಾಯಿ ಇದ್ದ ಹಾಗೆ, ಇವಳ ಅತ್ತೆಕೂಡ ಒಬ್ಬ ತಾಯಿ. ಆ ತಾಯಿಯ ಮನಸ್ಸನ್ನು ನೋಯಿಸುವುದರಿಂದ ಈ ಹೆಣ್ಣು ಮಕ್ಕಳಿಗೆ ಅದು ಯಾವ ಖುಷಿಯೋ ನಾ ಕಾಣೆ. ಇನ್ನೊಬ್ಬರ ನೋವಿನಲ್ಲಿ ಖುಷಿಯನ್ನು ಹುಡುಕುವ ಪ್ರವೃತ್ತಿ..ಇದೇನಾ ಮಾನವೀಯತೆಯ ಲಕ್ಷಣ? ಹಿಂದೆ ಒಂದು ಮದುವೆಯಾಯ್ತು ಎಂದರೆ ಅದು ಎರಡು ಸಂಸಾರಗಳ ನಡುವಿನ ಬಾಂಧವ್ಯದ ಬೆಸುಗೆಯಾಗಿತ್ತು. ಇವತ್ತು ಹೆಣ್ಣುಮಕ್ಕಳು ಮದುವೆಯಾಗುವ ಮೊದಲೇ ಕಂಡೀಷನ್ ಇಡುತ್ತಾರೆ. ಮದುವೆಯಾದ ಮೇಲೆ ನಿನ್ನ ತಂದೆತಾಯಿ ನಮ್ಮೊಂದಿಗೆ ಇರಲಿಕ್ಕಿಲ್ಲ. ಅವರಿಗೆ ಬೇರೇಯೇ ಮಾಡಿಕೊಡು. ನಾನು ಮದುವೆಯಾಗುತ್ತಿರುವುದು ನಿನ್ನನ್ನು ಮಾತ್ರ. ನಿನ್ನ ತಂದೆ ತಾಯಿಯನ್ನು ನೋಡಿಕೊಳ್ಳುವ ಅಗ್ರಿಮೆಂಟ್ ಮಾಡಿಕೊಡುತ್ತಿಲ್ಲ. ನಮಗೂ ಪ್ರೈವೆಸಿ ಬೇಕು. ಕಷ್ಟಪಟ್ಟು ಸಾಕಿ ಸಲಹಿದ ಆ ತಾಯಿಗೆ ಇದನ್ನೆಲ್ಲ ಕೇಳಿ ಹೇಗಾಗಬಾರದು. ಯಾವ ರೀತಿಯ ಸಂಸ್ಕಾರ ಈ ಹೆಣ್ಣುಮಕ್ಕಳಿಗೆ ಸಿಕ್ಕಿದೆ? ಇವರನ್ನು ನೋಡಿಯೇ ಆ ಚಿಕ್ಕ ಮಕ್ಕಳು ಕಲಿಯುವುದಲ್ವಾ? ಮನೆಯಲ್ಲಿ ಹಿರಿಯರಿದ್ದರೇ ಆ ಮನೆಗೆ ಎಷ್ಟೊಂದು ಶೋಭೆ! ಅಜ್ಜಿಅಜ್ಜಂದಿರ ಛತ್ರಛಾಯೆಯಡಿ ಬೆಳೆದ ಮಕ್ಕಳು ಕೂಡ ಎಷ್ಟೊಂದು ಸಂಸ್ಕಾರವಂತರಾಗಿರುತ್ತಾರೆ. ಇದೆಲ್ಲ ಇವಾಗಿನ ಹೆಣ್ಣುಮಕ್ಕಳಿಗೆ ಯಾಕೆ ಅರ್ಥವಾಗುತ್ತಿಲ್ಲ. ಇನ್ನು ಕೆಲವು ಹೆಣ್ಣು ಮಕ್ಕಳಿಗೆ ಅತ್ತೆಯಂದಿರು ಮನೆಯ ಕೆಲಸದಾಳಿನ ಹಾಗೆ. ಒಂದು ದಿನ ಕೆಲಸ ಮಾಡದೇ ಇದ್ದರೆ ಸಾಕು, ಇವರ ದೂರುಗಳ ಪಟ್ಟಿ ಸಿದ್ಧವಾಗಿರುತ್ತದೆ. ಒಟ್ಟಾರೆ ಎಲ್ಲರಿಗೂ ಒಬ್ಬರ ಮೇಲೆ ಇನ್ನೊಬ್ಬರು ಅಧಿಕಾರ ಚಲಾಯಿಸುವ ಚಪಲ. ಎಲ್ಲ ಹೆಣ್ಣುಮಕ್ಕಳು ಇವರ ಹಾಗೇನೆ ಇರೋದಿಲ್ಲ. ಕೆಲವು ಅತ್ತೆಯಂದಿರು ಎಷ್ಟೇ ಕಷ್ಟಕೊಟ್ಟರು, ಸಹಿಸಿಕೊಂಡು, ತಮ್ಮ ಸ್ವಂತ ತಾಯಿಯ ಹಾಗೇ ಪರಿವರ್ತನೆ ಮಾಡಿಕೊಳ್ಳುವ ಜಾಣ್ಮೆಯ ಹೆಣ್ಣು ಮಕ್ಕಳೂ ಇದ್ದಾರೆ ನಮ್ಮ ನಡುವೆ. ಅತ್ತೆಗೆ ಏನಾದರೂ ಹೇಳಿದರೆ ಎಲ್ಲಿ ಗಂಡನ ಮನಸ್ಸಿಗೆ ನೋವಾಗುವುದೋ ಎಂದು ಭಾವಿಸಿ, ಹೊಂದಾಣಿಕೆ ಮಾಡಿಕೊಂಡು ಹೋಗುವ ಹೆಣ್ಣು ಮಕ್ಕಳು ಇದ್ದಾರೆ. ಇದನ್ನು ನೋಡಿ ಎಲ್ಲೋ ಒಂದು ಕಡೆ ಮನಸ್ಸಿಗೆ ಸಮಾಧಾನವಾಗುತ್ತದೆ. ಮಾನವೀಯತೆಯ ಕೊಂಡಿ ಪೂರ್ಣವಾಗಿ ಕಳಚಿಕೊಂಡಿಲ್ಲ ಎನ್ನುವ ಆಶಾಭಾವನೆ ಮನಕ್ಕೆ ಮುದನೀಡುತ್ತದೆ.

ಈ ಸಂದರ್ಭದಲ್ಲಿ ಬೇಂದ್ರೆಯವರ ಮುತ್ತಿನಂಥ ಮಾತುಗಳು ನೆನಪಾಗುತ್ತದೆ. "ಒಬ್ಬರು ಮತ್ತೊಬ್ಬರನ್ನು ತಿಂದು ಬದುಕಬಾರದು ತಿಳಿದು ಬದುಕಬೇಕು".

**– ಡಾ. ಜ್ಯೋತಿ ಸತೀಶ್**

# FAKE NEWS



✍Dr. B.R. Manjunath

Spreading and dissemination of stories which are "lies" is called Fake News.

It is generally presumed that Fake News originates with Herr Goebbels, who was a Minister to Adolf Hitler, during the Second World War. This is also a fake story. It is recently discussed that Donald Trump, had hired Cambridge Analytic from Britain to create fake stories during his election campaign in 2016. The same company was also in news in India as well recently as it was given out that Congress party had hired this company.

Earlier, news papers were the tools to spread these stories, and they were also called paid news. Today, Face book, Twitter, WhatsApp, Instagram spread these fake stories all over the globe within minutes. People, Corporates, Political parties, Religion Institutions, spend enormous funds to create fake stories. What is the purpose of Fake News? The purpose is to brainwash the people at large. "If a lie is repeated thousand times, it becomes the truth" is the principle on which fake news is spread. What is the final goal of spreading fake news / stories?

It is to decry your opponent, and pose yourself or your product or your institution as morally / ethically standing high, which finally accrues wealth to yourself. H.G.Wells, Novel Tono Bunge hilariously reveals how a fake story on a fake medicine is spread. So that everyone purchases it with the resulting finances for the company.

When did fake news really originate? It is the desire to market a product that resulted in the origins of fake stories. Religion was the first product to be marketed across wider geographical regions and globe. It is necessary to make your prophet or God as superior to every other competitor, so that more and more people follow the religious. Where there are more people, there is a market and more money to make.

So miracles and Mythology are the raw materials to create a fake story. For example;

1. Adam and Eve were banished from Garden of Eden, because they committed the "original Sin" which is sex. So, all humans born out of sex is not clean as they are fainted with original sin. So, let us create some me from virgin Births. It may be that the offspring has Father, Mother and brothers, but let us create a story. Saying, He is the son of God, as he is untouched by this Sin. This story is told a 100 million times and many people believe, without questioning. People do not even ask, "when a woman gives birth to an offspring, without any male partner, then the offspring, "has got a girl only" not a Man, as she cannot donate X chromosomes. But a miraculous lie need to be repeated many times to become truth even against scientific evidence.

2. The Indian religions abound in such fake stories, and many puranas have sprung up over the past two thousand years. "Doutyas are bad and they should be shunned. They are ugly and have horns. They are rapists and swindles. Although there are many instances where the King of Devatas and his assistants go and stop Yagnyas and rape women, it is ok. We can distribute their sin, to Earth, Moon and Women, and cleanse the Devatas". Vaishnavites are in the forefront of creation of fake stories, as they have developed a powerful tool of Harikatha, which later gave rise to Dramas and Folk theatre, which spreads these fake stories. "But Sir, Indra and Vishnu raped women?" "It is ok I say, they just cleansed these women of their sins" is the answer.

Asha Ram Bapu, Ram Rahim Nityananda and Many popes, Bishops, followed the same technique of spreading fake stories to have more followers.

In the past 180 years since the Crimean war, fake story factories have worked hard to make their opponents as villains and Devils.

History is his Story – The story of the winner. These fake stories are taught in the schools, so as to harvest future generation of followers.

Fake stories of Democracy, and how the Heroes who fought for them, are manipulated, concerted to make them God like Idols. Thomas Jefferson, who wrote the constitution of United States of America, with the Hoopla "individual Liberty and justice", declaring liberty to all its citizens, had hundreds of Black slaves who had no liberty, were in chains and he also fathered children from these Black Slaves. He is today bandied as the Great person who bestowed Liberty and Justice to one and all.

This is fake story. So is the story o f George Washington, who is declared as the father of the Nation.

In our own India, Mohandas Karamachand Gandhi, is taught to all children for the past 70 years as the "Father of Nation" although, nothing is the constitution or any statue bestows this position on him. This fake story is perpetuated by already brain washed teachers across India, without questioning.

Another fake story, on why India is called "Bharat". This story says, Bharat is the son of Shakuntala and Dushyant. This fake story is based on another fake story created b Kalidasa, who made "Dushyant" a play boy is not a Hero, by destroying the story of Shakuntala in Mahabharat compared by Vyas Maharshi. In Mahabharat itself, it is explicitly stated, that this land is named after Bharat, who was the son of Nabhiraja and Jayanti and elder brother of Bahubali. This was inconvenient to Vaishnavites, as they did not wish to acknowledge a Jain King as the father of this Land. Therefore conveniently the fake story of Kalidasa came in handy. This is how LIE REPEATED TEN THOUSAND CRORES TIMES, HAS BECOME THE GOSPEL TRUTH.

Another lie is being perpetuated is the DNA of all Indians is the same, and Sanskrit is the mother of all Indian Languages. It does not matter, what the Scientific evidences speak.

GOTRA is a genetic lineage, and only the father determines the Gotra / Lineage, is the other lie.

Today, fake stories control our lives, thinking, and future. It is of no purpose to blame social media, yesterday's Aralikatte or the seating under the people tree has morphed into Facebook and WhatsApp. The tools have changed but not the mindset.

All of us revel in fake stories, as they are far more entertaining than truth. TRUTH IS HARSH, LIES ARE LIKE MARSH MELLOW.


ಮೈಸೂರು ಅಸೋಸಿಯೇಷನ್, ಮುಂಬಯಿ

**THE MYSORE ASSOCIATION, BOMBAY**

393, Bhau Daji Road, Matunga, Mumbai – 400 019.

Tel.:(022) 24024647/ 2403 7065 Website : www.mysoreassociation.in. E-mail : mysoreassociation.mumbai@gmail.com

## SUGAMA SANGEET COMPETITION

**Competition – Rules & Regulations**

There will be 3 age groups:
(1) 8 yrs to 13 yrs. (13 yrs completed as on 30.07.2019)
(2) 14 yrs. to 18 yrs. (18 yrs. completed as on 30.07.2019)
(3) 18 yrs & above

Competition Date: **17th August 2019**

**Timing:**

**Group - I – 10.00 a.m** **Group -II – 11.00 a.m** **Group – III – 2.30 p.m.**

Participants can choose to sing any one of the following

(1) Kannada Bhavageethe (Kannada Poem)

(2) Kannada Dasarapada

(3) Kannada Janapada

**Duration :** 3 Minutes for each song.

**Prizes in each group:**

| | | | | | |
|---|---|---|---|---|---|
| **1st Prize** | - | **Rs. 1,000/-** | **2nd Prize** | - | **Rs. 750/-** |
| **3rd Prize** | - | **Rs. 500/-** | **1 Encouragement Prize** | - | **Rs. 250/-** |


Judges decision is final. Judges can stop a participant at any time during the rendition. If participants in any group are less than 5, there will be no prize, only appreciation certificate will be given. Number of prizes will depend on number of entries in the group at the discretion of the organizers. Last year 1st Prize winners are not eligible for the competition.

Entry Fee: Rs. 50/- per category.

Entries have to be submitted at least 5 days before the competition day. No entries will be entertained on the same day of competition.

**(NOTE: RESULTS WILL BE ANNOUNCED ON THE SAME DAY AND PRIZES WILL BE AWARDED AT THE CONCLUSION OF THE COMPETITION)**

# CREATION



✍ **G. V. Rao**

While humans have created satellites, Sky scrapers and what not; they are yet to get a clear answer to the age old question – "Who created the Humans, How & Why? The search for an answer has been there for thousands of years. One of the concepts established by our forefathers is that the natural forces got aligned in a specific pattern and then came colours, sound, earth, water, vegetables (plants), Animals & Human beings.

The characteristics of Plants, Animals & Humans are worth analysing.

Plants are immobile; genderless; utilising sun's rays carbon-di-oxide, water & chemicals in earth for survival; produce oxygen shelter & eatables for the needy living beings; does not quarrel with anyone; reproduce identical species & die out leaving behind useful timber. In other words plants live without any selfish desire and continuously help other living beings.

Animals are dynamic, moving about in water or air or earth. They are basically selfish in nature. They are eager to quarrel and snatch food which is mostly flesh of other animals. Primarily there is not much of a difference in the behavior within the particular species. When they die, they leave behind identical generation. They are intelligent when compared to plants. Both males & females live together.

Humans are intelligent, ambitious, proud, selfish, arrogant & unpredictable in nature.

Each Country, religion, trade, governing practice style of living has its own plus & minus features. Most humans feel that they are superior and others are inferior to them. Very often there is either superiority or inferiority complex; higher & lower class of trades, castes, cultures, and quarrels plus disputes between the groups. In short there is imbalance among individuals due to one reason or the others.

Our ancestors have recognized the importance of leading selfless life and appreciated the selfless attitude in mother earth, rivers, plants, cows and humble house wives. Importance of house wife is worth recording here. She is the one who feeds you eatables with motherly affection; cleans the house like house maid; clears your doubts like a minister; pardon your mistakes like mother earth and entertains all members of the family smilingly.

It is very necessary that humans give respect to mother earth, rivers, plants, cows & women to reduce the confusion & chaos that exists throughout the World.

To my mind, there is a solution and that is :- everyone irrespective of County of origin; religion followed, language spoken; trade followed will accept that in plant life there is no quarrel of any type and if we all (every one) agree & adopts to work like a plant without selfish interest there will be unity in Diversity & Success.

Activities suggested are:-

| ADOPT | REJECT |
|---|---|
| • Planting of Trees. | • Deforestation |
| • Rain water Harvesting Techniques | • Never quarrel with anyone even with enemies or those who have erred |
| • Water Treatment plants | • Hasty Decision making |
| • Training programmes to educate the ignorant people | • Selfish projects |
| • Live well & let others also live well | |

Where there is a will, there is a way.

# ಬ್ರೀಜ್



✍ ಕೆ. ಕಮಲಾ

ಬ್ರೀಜ್ ಎಂಬ ಪದ ಕೇಳಿದ ಕೂಡಲೇ ನಮ್ಮ ಮನಸ್ಸಿಗೆ ಮುದ ನೀಡಿ ಆಹ್ಲಾದವನ್ನುಂಟು ಮಾಡುವ ತಂಗಾಳಿಯ ತಂಪಾದ ಅನುಭವ ಕಣ್ಣ ಮುಂದೆ ಬಂದು ನಿಲ್ಲುತ್ತದೆ. ಇಲ್ಲಿ ನಾ ಹೇಳ ಹೊರಟಿರುವುದು ಇದೇ ರೀತಿ ನನ್ನ ಜೀವನದಲ್ಲಿ ತಂಪಾದ ಅನುಭವ ನೀಡಿದ ನನ್ನ ಮುದ್ದು ನಾಯಿಮರಿ ಬ್ರೀಜ್ ಬಗ್ಗೆ.

ನನಗೆ ಚಿಕ್ಕಂದಿನಿಂದಲೂ ನಾಯಿಯನ್ನು ಕಂಡರೆ ಬಹಳ ಹೆದರಿಕೆ. ನಾಯಿಯ ನೆನಪಾದರೆ ಸಾಕು ಅದು ನನ್ನನ್ನು ಕಚ್ಚುತ್ತಿರುವ ಚಿತ್ರವೇ ನನ್ನ ಮನಸ್ಸಿನಲ್ಲಿ ಅಚ್ಚು ಮೂಡುತ್ತಿತ್ತು. ಹಾಗಾಗಿ ನಾಯಿಯನ್ನು ನೋಡಿದಾಗಲೆಲ್ಲ ನನ್ನ ಎದೆಯಲ್ಲಿ ಢವಢವ ಬಡಿತ ಉಂಟಾಗಿ ಹೆದರಿಕೆಯಿಂದ ಪಲಾಯನ ಮಾಡುತ್ತಿದ್ದೆ. ದೂರದಲ್ಲೆಲ್ಲೋ ನಾಯಿ ಕಂಡರೆ ಆ ರಸ್ತೆಯನ್ನೇ ಬಿಟ್ಟು ಬೇರೆ ರಸ್ತೆಯ ಮುಖಾಂತರ ಮನೆ ತಲುಪುತ್ತಿದ್ದೆ. ಬೆಂಗಳೂರಿನಲ್ಲಿದ್ದಾಗ ಒಮ್ಮೆ ಮನೆಗೆ ನಾಯಿ ಮರಿಯನ್ನು ತಂದಿದ್ದಾಗ, ನನ್ನ ಭೀತಿ ಅವಾಂತರಗಳಿಂದಾಗಿ ಒಂದೇ ತಿಂಗಳಲ್ಲಿ ನಾಯಿಯನ್ನು ಮನೆಯಿಂದ ಸ್ನೇಹಿತರ ಮನೆಗೆ ವರ್ಗಾಯಿಸುವುದರಲ್ಲಿ ಯಶಸ್ವಿಯಾಗಿದ್ದೆ.

ಹೀಗಿರುವಾಗ 2015ರಲ್ಲಿ ನನ್ನ ಮಗಳು ನಮ್ಮ ಮನೆಗೆ ನಾಯಿ ಮರಿಯನ್ನು ತರಬೇಕೆಂಬ ಪ್ರಸ್ತಾಪ ಇಟ್ಟಳು. ತರದೆ ಇರಲು ಮನ ಒಲಿಸುವ ಪ್ರಯತ್ನ ವಿಫಲವಾದವು. ಕಡೆಗೊಮ್ಮೆ ಅವಳು ನಾನು ನಿನಗೆ ನಾಯಿ ಮರಿ ತರುವ ಮಾಹಿತಿ ನೀಡುತ್ತಿದ್ದೇನೆ ನಿನ್ನ ನಿರ್ಧಾರಕ್ಕೆ ಕಾಯುತ್ತಿಲ್ಲ ಎಂದು ಹೇಳಿ ನನ್ನ ತಂದೆಯನ್ನು ಪುಸಲಾಯಿಸಿ ನಾಯಿ ಮರಿಯನ್ನು ಮನೆಗೆ ತಂದೇ ಬಿಟ್ಟಳು. 45 ದಿನದ ಆ ನಾಯಿ ಮರಿಗೆ ಬ್ರೀಜ್ ಎಂದು ನಾಮಕರಣವನ್ನು ಮಾಡಿ ಬಿಟ್ಟಳು.

ಪುಟ್ಟ ಬ್ರೀಜ್ ಮರಿಯೊಂದಿಗೆ ನನ್ನ ಒಡನಾಟ ಆರಂಭವಾಗಿದ್ದು ಇಲ್ಲಿಂದಲೇ. ಆರಂಭದಲ್ಲಿ ಅದರ ಲಾಲನೆ ಪಾಲನೆಯನ್ನು ಮಗಳೇ ವಹಿಸಿಕೊಂಡರೂ ಅದು ಮಧ್ಯರಾತ್ರಿ ಗಲಾಟೆ ಮಾಡತೊಡಗಿದಾಗ ಮಗಳು ನಿದ್ರೆಯಿಂದ ಎದ್ದೇಳಲು ಕಷ್ಟಪಡುತ್ತಿದ್ದಳು. ನಾನೂ ಹಾಗೂ ನನ್ನಅಮ್ಮ ಬ್ರೀಜ್ ನ ಆರೈಕೆಯ ಜವಾಬ್ದಾರಿ ತೆಗೆದುಕೊಳ್ಳತೊಡಗಿದೆವು. ಆ ಬ್ರೀಜ್‌ನ ಕಣ್ಣುಗಳು ದೊಡ್ಡದಾಗಿದ್ದು ಅದರ ಭಾವನೆಗಳನ್ನು ಭಾಷೆ ಇಲ್ಲದೆಯೂ ಅತ್ಯದ್ಭುತವಾಗಿ ವ್ಯಕ್ತಪಡಿಸುತ್ತಿತ್ತು. ಚಿಕ್ಕ ಮಕ್ಕಳ ರೀತಿಅದು ಆಟ ಆಡುವ ರೀತಿ, ಬಯಸಿದ್ದನ್ನು ಪಡೆದುಕೊಳ್ಳುವ ಹಠ ಎಲ್ಲವನ್ನು ನೋಡಿದ ಮೇಲೆ ಬ್ರೀಜ್ ಒಂದು ಪ್ರಾಣಿ ಎಂಬುದೇ ಮರೆತು ಹೋಗಿ ನಮ್ಮ ಪರಿವಾರದ ಒಂದು ಸದಸ್ಯನಾಗಿ ಒಪ್ಪಿಕೊಳ್ಳುವ ಮಟ್ಟಕ್ಕೆ ಬಾಂಧವ್ಯ ಬೆಳೆಯಿತು.

ಬ್ರೀಜ್ ಬೆಳೆಯುತ್ತಾ ಹೋದಂತೆ ಅದರ ಆಟ ಪಾಠಗಳನ್ನೆಲ್ಲಾ ನೋಡಿ ಮನೆ ಮಂದಿ ಎಲ್ಲಾ ಸಂತೋಷಪಡುತ್ತಿದ್ದೆವು. ಅದು ಮುನಿಸಿಕೊಳ್ಳುತ್ತಿದ್ದ ರೀತಿ, ಬಿಸ್ಕೆಟ್ಟಿಗಾಗಿ ಹಠ ಮಾಡುತ್ತಿದ್ದ ರೀತಿ, ಆಸೆಗಾಗಿ ಹೇಳಿದ ಕಸರತ್ತನ್ನೆಲ್ಲಾ ಮಾಡುತ್ತಿದ್ದ ರೀತಿ ಬಹಳ ಅಪ್ಯಾಯ ಮಾನವಾಗಿತ್ತು. ಮನುಜರಂತೆಯೇ ಪ್ರಾಣಿಗಳಿಗೂ ಆಸೆಯ ಮೋಹ ಉಂಟಾಗುವುದನ್ನು ನೋಡಿ ಆಶ್ಚರ್ಯವೂ ಆಗುತ್ತಿತ್ತು. ಮನುಜ ಜೀವಿಗಿಂತ ಹೆಚ್ಚಿನ ಪ್ರೀತಿಯನ್ನು ಅದು ಎಲ್ಲರ ಮೇಲೂ ತೋರುತ್ತಿತ್ತು. ನಾನು ಅಥವಾ ಅಮ್ಮ ಮಗಳಿಗೆ ಬೈದರೆ ಬ್ರೀಜ್‌ಗೆ ಕೋಪ ಬರುತ್ತಿತ್ತು. ನಾವೇನಾದರೂ ನೋವು ಎಂದು ನಾಟಕಮಾಡಿದರೆ ಆತಂಕ ಬ್ರೀಜ್‌ನಲ್ಲಿ ಮೂಡುತ್ತಿತ್ತು. ತನಗೆ ಆರೋಗ್ಯ ತಪ್ಪಿದರೆ ಮೌನವಾಗಿ ಸಹಿಸಿಕೊಂಡು ಸ್ವಲ್ಪವೂ ಗಲಾಟೆ ಇಲ್ಲದೆ ಔಷಧಿ ಸೇವಿಸಿ ವಿಶ್ರಾಂತಿ ಪಡೆಯುತ್ತಿತ್ತು.

ಇದೇ 2019ರ ಜನವರಿ ತಿಂಗಳಿನಲ್ಲಿ ಬ್ರೀಜ್ ಒಂದು ಪ್ರದರ್ಶನಕ್ಕೆ ಹೋಗಿ ಬಂದರಾತ್ರಿ ಉಸಿರಾಡಲು ಕಷ್ಟ ಪಟ್ಟಿತೆಂದು ಆಸ್ಪತ್ರೆಗೆ ಕರೆದೊಯ್ದೆವು. ಚಿಕಿತ್ಸೆಯಿಂದ ಗುಣವಾಗಿ ಇನ್ನೊಂದು ದಿನ ಡಾಕ್ಟರರ ನಿಗಾದಲಿ ಇರಬೇಕೆಂದು ಆಸ್ಪತ್ರೆಯಲ್ಲಿ ಬಿಟ್ಟು ಬಂದೆವು. ಮರುದಿನ ನಾನು ಮತ್ತು ಅಮ್ಮ ಆಸ್ಪತ್ರೆಗೆ ಹೋದಾಗ ಸಂತೋಷದಿಂದ ನಮ್ಮ ಜೊತೆ ಓಡಾಡಿತು. ನಂತರ ನಾನು ಮತ್ತು ಅಮ್ಮ ಮರಳಿ ಬರುವಾಗ ಬ್ರೀಜ್ ಮತ್ತೆ ಉಸಿರಾಡಲು ಕಷ್ಟ ಪಡುತ್ತಿದೆ ಎಂಬ ಕರೆ ಬಂತು. ನನ್ನ ಮಗಳು ಆಸ್ಪತ್ರೆಗೆ ದೌಡಾಯಿಸಿದಳು. ಅರ್ಧ ಗಂಟೆಯಲ್ಲಿ ಬ್ರೀಜ್ ನಮ್ಮನ್ನೆಲ್ಲಾ ಅಗಲಿ ಚಿರ ನಿದ್ರೆಗೆ ಜಾರಿ ಬಾರದ ಲೋಕವನ್ನು ಸೇರಿತು.

ನಮ್ಮ ಇಡೀ ಪರಿವಾರಕ್ಕೆ ಕಣ್ಮಣಿಯಾಗಿದ್ದ ಬ್ರೀಜ್ ಇನ್ನು ನೆನಪು ಮಾತ್ರ. ವೈಯಕ್ತಿಕವಾಗಿ ಬ್ರೀಜ್ ನನ್ನ ಪಾಲಿನ ಗುರು. ಏಕೆಂದರೆ ಪ್ರಾಣಿಗಳ ಜೀವನವನ್ನು ನಾನು ಹತ್ತಿರದಿಂದ ನೋಡಿದ್ದು, ಪ್ರಾಣಿಗಳು ನಿಷ್ಕಲ್ಮಷವಾಗಿ ತಮ್ಮ ಪ್ರೀತಿಯನ್ನು ನೀಡಿದ್ದು, ನನ್ನ ಮನಸ್ಸಿನ ಭಯವನ್ನು ದೂರ ಮಾಡಿ ಪ್ರಾಣಿಗಳಲ್ಲೂ ಮನುಜ ಸಹಜ ಭಾವನೆಗಳಿವೆ ಎಂಬ ಪಾಠ ಕಲಿಸಿದ್ದೂ ಸಹ ಇದೇ ಬ್ರೀಜ್.

ಬ್ರೀಜ್ ಎಲ್ಲಾದರೂ ಇರು, ಸಂತಸದಿಂದಿರು. ನಿನ್ನ ನೆನಪು ನನ್ನ ಮನಸ್ಸಿನಲ್ಲಿ ಅಚ್ಚಳಿಯದೇ ನಿಂತಿರುತ್ತದೆ.

# ಹಸಿರು ಗಾಜಿನ ಬಳೆಗಳೇ....



✍ ಡಾ. ಪೂರ್ಣಿಮಾ ಸುಧಾಕರ ಶೆಟ್ಟಿ

ಇಂದೇಕೋ ಬಳೆಗಾರ ತುಂಬಾನೇ ನೆನಪಾದ ಒಂದರೆಗಳಿಗೆ ಕಣ್ಮುಚ್ಚಿ ಕುಳಿತಾಗ ನನ್ನ ಬಾಲ್ಯ ನೆನಪಾಯಿತು. . ಅಪ್ಪ ಅಮ್ಮ ಮಾತ್ರವಲ್ಲ ಕೂಡು ಕುಟುಂಬದ ಎಲ್ಲರ ಪ್ರೀತಿಗೆ ಪಾತ್ರವಾಗಿದ್ದೆ. ನೋಡಿದ್ದು ಬೇಕು ಅಂದ್ರೆ ಪಪ್ಪ ಯಾವತ್ತೂ ಇಲ್ಲ ಅಂತಿರ್ಲಿಲ್ಲ. ಒಮ್ಮೊಮ್ಮೆ ತಮಾಷೆಗೆ ಪಪ್ಪ ಹೇಳ್ತಿದ್ದ ಮಾತನ್ನು ಈಗ ನನ್ನ ಮಗಳಿಗೆ ಹೇಳ್ತೀನಿ. ಅದೇನೆಂದ್ರೆ ನನ್ನ ಮಗಳು ಆಕಾಶದಲ್ಲಿರೋ ಚಂದಮಾಮ ಬೇಕು ಅಂತಾಳೆ. ಸರಿಯಮ್ಮ ಆಮೇಲೆ ತಂದು ಕೊಡ್ತೀನಿ ಅಂದ್ರೆ ಮುಗಿತು. ಅವಳ ಪಾಡಿಗೆ ಅವಳಿರ್ತಾಳೆ ಅಂತ. ಆಗಲ್ಲ ಅಂದ್ರೆ ಮಾತ್ರ ಅಳೋಕೆ ಶುರು . ಅಂದ್ರೆ ನಾನು ಹಠಮಾರಿಯಂತೂ ಆಗಿರ್ಲಿಲ್ಲ ಅಂತ ಅಮ್ಮನೇ ಹೇಳ್ತಾ ಇದ್ದರು. ಆದರೆ ಬಳೆಯ ವಿಷಯದಲ್ಲಿ ಮಾತ್ರ ನಾನು ಅತ್ತು ರಂಪಾಟ ಮಾಡ್ತಾ ಇದ್ದೆ. ಆ ನೆನಪುಗಳು ಇಂದಿಗೂ ಹಸಿಹಸಿಯಾಗಿದೆ. ಈಗಿನ ಮಕ್ಕಳಿಗೆ ಇದೆಲ್ಲ ಕತೆಯೆನಿಸಬಹುದಾದರೂ ನಾವದರ ಸವಿ ಕಂಡವರು. ಖುಷಿ ಪಟ್ಟವರು. ಬಣ್ಣ ಬಣ್ಣದ ಬಳೆಗಳನ್ನು ಹೆಗಲಿಗೆ ನೇತು ಹಾಕಿಕೊಂಡು ಬಳೆಗಾರ ಮನೆಬಾಗಿಲಿಗೆ ಬಂದಾಗ ಎಲ್ಲಿಲ್ಲದ ಖುಷಿ. ಆಗ ಅಮ್ಮ ಎಷ್ಟೇ ಕೆಲಸದಲ್ಲಿ ಇರಲಿ ಅವರು ಅದೆಲ್ಲವನ್ನು ಬಿಟ್ಟು ಬರಲೇ ಬೇಕು. ಮೊದಲು ನನಗೆ ಇಷ್ಟವಾಗುವ ಬಳೆ ತೋರಿಸಬೇಕು. ಆಮೇಲೆ ಉಳಿದವರಿಗೆ. ನನ್ನ ಎರಡೂ ಕೈತುಂಬಾ ಬಳೆ ತೊಡಿಸಬೇಕು. ಅದನ್ನು ನೋಡಿದಷ್ಟು ಖುಷಿ.



ಆ ಸಂಭ್ರಮವವನ್ನು ವರ್ಣಿಸುವುದೆಂತು. ಬಳೆ ಒಡೆದು ಹೋದ ದಿನದ ದುಃಖವನ್ನು ಹೇಳಲಾರೆ. ಆ ಒಡೆದ ಚೂರುಗಳನ್ನು ಕೂಡಾ ನಾವು ಜೋಪಾನವಾಗಿ ಎತ್ತಿಡುತ್ತಿದ್ದೆವು. ನಂತರ ಸ್ನೇಹಿತರ ಜೊತೆ ಕೂಡಿ ಆಟ ಆಡುತ್ತಿದ್ದೆವು. ನನ್ನ ತಂಗಿ ವೈಶಾಲಿಯ ಗೋಳು ಇನ್ನೊಂದು ತರದ್ದು. ಕೈ ಗಟ್ಟಿಯಾದ್ದರಿಂದ ಅವಳ ಸೈಜಿನ ಬಳೆ ಸಿಗುವುದೇ ಕಷ್ಟ. ಬಳೆಗಾರನ ಬಳಿ ಕೂತರೆ ಸಾಕು ಇವಳಿಗೆ ಎಲ್ಲಿಂದ ಬಳೆ ಹುಡುಕಿ ತರಲಿ ಎಂದರೂ ಬಳೆಗಾರ ಅವಳಿಗಾಗಿ ಚಂದದ ದೊಡ್ಡ ಸೈಜಿನ ಬಳೆ ತರದೇ ಬಿಡುತ್ತಿರಲಿಲ್ಲ. ನಮಗೆ ಬಳೆ ತೊಡಿಸಲು ನಮ್ಮ ಮನೆಗೆ ಬರುತ್ತಿದ್ದುದು ಮಂಜುನಾಥ ದಂಪತಿಗಳು. ಅವರಿಗೆ ಮಕ್ಕಳಿರಲಿಲ್ಲ. ಅದೇನೋ ಅವರಿಗೆ ನಮ್ಮ ಮೇಲೆ ವಿಶೇಷ ಪ್ರೀತಿ. ವೈಶಾಲಿಯ ಕೈಗಳು ಕೆಂಪಾಗಿ ನೋವಿನಿಂದ ಅವಳ ಕಣ್ಣಲ್ಲಿ ನೀರು ಹರಿಯುತ್ತಿದ್ದುದನ್ನು ನೋಡಿ ಬೋಳ ಕಣ್ಣಿನಿಂದ ಬೀಳುವ ಹನಿಯೂ ದೊಡ್ಡ ಗಾತ್ರದ್ದು ಎಂದು ನಗಿಸಲು ಪ್ರಯತ್ನಿಸುತ್ತಿದ್ದರು. ಅವಳ ಕೈಯನ್ನು ಮೃದುವಾಗಿ ತಿಕ್ಕಿ ನೋಡು ನೋವೆಲ್ಲ ನನ್ನ ಬಳಿ ಬಂತು, ಕೈಯ ಕೆಂಪೆಲ್ಲ ನಿನ್ನ ಕೆನ್ನೆಗೆ ಬಂತು. ಬಳೆ ಇಟ್ಟು ಎಷ್ಟು ಚೆನ್ನಾಗಿ ಕಾಣುತ್ತಿದ್ದಿ ಎಂದಾಗ ನಾಚಿ ಓಡಿಹೋಗುತ್ತಿದ್ದ ಆ ಕ್ಷಣಗಳು ಈಗಲೂ ನೆನಪಿದೆ. ಚಿಕ್ಕಮ್ಮನ ಮಗಳು ಅಮಿತಾಳನ್ನು ಅವರು ಕಾಲಿ ಎಂದೇ ಕರೆಯುತ್ತಿದ್ದರಿಂದ ನಿನಗೊಪ್ಪುವ ಬಳೆ ತಂದಿದ್ದೇನೆ ಎಂದು ತೋರಿದಾಕ್ಷಣ ಅವಳು ಮುಖದ ತುಂಬಾ ಮಂದಹಾಸ. ಇವೆಲ್ಲವನ್ನು ನೋಡಿ ಕಣ್ಣು ದೊಡ್ಡದು ಮಾಡಿ ಮುಖ ಸಣ್ಣದಾಗಿಸಿಕೊಳ್ಳುತ್ತಿದ್ದವನು ತಮ್ಮ ಚಂದ್ರಹಾಸ.



ನನ್ನ ಮದುವೆಯ ಸಮಯದಲ್ಲಿ ಬಳೆ ಇಡುವ ಸಂಪ್ರದಾಯಕ್ಕೆ ಬಂದ ಬಳೆಗಾರ ನಮ್ಮ ಮಗು ಇಷ್ಟು ದೊಡ್ಡದಾಯ್ತಾ ಅಂತ ಪತಿ ಪತ್ನಿ ಇಬ್ಬರೂ ದೃಷ್ಟಿ ತೆಗೆದು ತಮಾಷೆ ಮಾಡುತ್ತಿದ್ದರು. ಯಾಕೆಂದರೆ ಸುಧಾಕರ್ ಅವರ ಮನೆಗೂ ಅವರೇ ಈ ಬಳೆ ಇಡುವ ಸಂಪ್ರದಾಯಕ್ಕೆ ಹೋಗಿದ್ದರು.

ಅವರ ಮನೆಗೂ ಹೋಗಿ ಬಂದದ್ದು, ಅವರಿಂದಲೇ ನನಗಾಗಿ ಬಳೆಯನ್ನು ಆರಿಸಿ ತಂದು ನನ್ನ ಕೈಗೆ ಇಟ್ಟ ಮನೆಯವರಂತೇ ಇದ್ದ ಇಂತಹ ಬಳೆಗಾರರು ಇಂದು ಸಿಗಲಾರರೋ ಏನೋ. ಇದೆಲ್ಲ ಯಾವುದೋ ಸಿನೆಮಾ ಕಥೆಯಲ್ಲ. ಅದು ಸತ್ಯ. ಚಿನ್ನದ ಬಳೆಯ ನಡುವೆ ಕೆಂಪು ಬಣ್ಣದ ಸಣ್ಣ ಗಚ್ಚಿನ ಬಳೆ ಕೈಗೆ ಹಾಕಿ ಆ ದಂಪತಿಗಳು ಹರಸಿ ಹಾರೈಸಿದರು. ಮದುವೆಯಾಗಿ ಮುಂಬಯಿ ಮಹಾನಗರಕ್ಕೆ ಕಾಲಿರಿಸಿದಂತೆ ನಿಧಾನಕ್ಕೆ ಈ ಬಳೆಗಳು ಕೈಯಿಂದ ಮಾಯವಾಗತೊಡಗಿತು.

ಅದುವರೆಗೂ ಮನೆಕೆಲಸ ಮಾಡಿ ಗೊತ್ತಿಲ್ಲದ ನನಗೆ ಮದುವೆಯ ನಂತರ ನಮ್ಮಿಬ್ಬರ ಪುಟ್ಟ ಸಂಸಾರ ಹೂಡುವ ಆತುರ ಕಾತುರದಲ್ಲಿ ಇಟ್ಟ ಬಳೆಗಳು ಒಡೆದು ಹೋದದ್ದೇ ಹೆಚ್ಚು. ವ್ಯಸ್ತ ಜೀವನಕ್ಕೆ ಹೊಂದಿಕೊಂಡಂತೆ ಬಳೆಗಳ ಝಣ್ ಝಣ್ ನಿನಾದವೂ ಕಡಿಮೆಯಾಯಿತು. ಫ್ಯಾಶನ್‌ಗೆ ಕಡಿಮೆಯಾಯಿತೋ... ಅಥವಾ ಮುಂಬಯಿಯಂತಹ ಮಹಾನಗರಿಯ ಗಾಳಿಯಲ್ಲಿ ಬಳೆಯ ಮೋಹವೇ ತೇಲಿ ಹೋಯಿತೋ... ಗೊತ್ತಿಲ್ಲ.

ಚಿನ್ನದ ಬಳೆಗೆ ಮಾತ್ರ ಸ್ಥಾನ ಎನ್ನುವಷ್ಟರ ಮಟ್ಟಿಗೆ ಗಾಜಿನ ಬಳೆಗಳ ಪ್ರೀತಿ ಕಡಿಮೆಯಾಯಿತು.

ಆಗಾಗ ಸಂಘ ಸಂಸ್ಥೆಗಳ ಮಹಿಳಾ ವಿಭಾಗದವರು ಆಯೋಜಿಸುವ ಅರಸಿನ ಕುಂಕುಮ, ಅಥವಾ ಪೂಜೆಗಳಲ್ಲಿ ಕಾಣುವ ಈ ಬಳೆಗಳು ಹಿಂದಿನಂತೆ ಕೈ ಬಳೆ ಝಣ ಝಣ ಎಂದು ಪತಿ ಪತ್ನಿಯನ್ನು ರಮಿಸುವುದರಿಂದಲೂ ವಂಚಿತನಾಗಿದ್ದಾನೆ ಎನ್ನಬಹುದಲ್ವೇ.... ಅಥವಾ ಬಳೆ ತೊಡಲು, ತೊಡಿಸಲು ಸಮಯದ ಅಭಾವವೂ ಇರಬಹುದೇ... ಗೊತ್ತಿಲ್ಲ.]

ನನಗಿದ್ದ ಈ ಬಳೆಗಳ ಮೇಲಿನ ಪ್ರೀತಿ ನನ್ನ ಮಗಳಿಗಿಲ್ಲ ಯಾಕೆ ಎಂದೂ ನಾನು ಹಲವಾರು ಬಾರಿ ಯೋಚಿಸಿದ್ದಿದೆ. ನಾವೇ ಕೈತುಂಬಾ ಬಳೆ ತೊಡಿಸಿ ಸಂತಸ ಪಟ್ಟರೆ ನಮಗೆ ಬೇಡ. ನಮಗಿಷ್ಟವಿಲ್ಲ ಎನ್ನುತ್ತಾರೆ ನಮ್ಮ ಮಕ್ಕಳು. ಏನೇ ಇರಲಿ ಕಾಲ ಬದಲಾದರೂ ಚಿನ್ನದ, *(ಪುಟ 21ಕ್ಕೆ...)*

# ಅಸೋಸಿಯೇಷನ್ನಿನಲ್ಲಿ ಚಿತ್ರಕಲಾ ಸ್ಪರ್ಧೆ ಮತ್ತು ಪ್ರದರ್ಶನ



ಚಿತ್ರಕಲಾ ಪ್ರದರ್ಶನವನ್ನು ಶ್ರೀ. ಎಸ್. ಜಿ. ವಾಸುದೇವ್ ಅವರು ಉದ್ಘಾಟಿಸುತ್ತಿರುವುದು

ಅಂತರರಾಷ್ಟ್ರೀಯ ಖ್ಯಾತಿಯ ಹಿರಿಯ ಕಲಾವಿದ, ಕನ್ನಡಿಗ, ಶ್ರೀ. ಎಸ್. ಜಿ. ವಾಸುದೇವ್‌ರವರ ಕೃತಿಗಳ "ನಡೆದು ಬಂದದಾರಿ" (Retrospective) ಪ್ರದರ್ಶನ ಮುಂಬಯಿಯ ಪ್ರತಿಷ್ಠಿತ National Gallery & Modern Arts ನಲ್ಲಿ ಜುಲೈಯ ಮೊದಲ ವಾರ ನಡೆಯುವ ಸಂದರ್ಭದಲ್ಲಿ, ಅದರಲ್ಲಿ ಭಾಗವಹಿಸುವುದಕ್ಕಾಗಿ ಮುಂಬಯಿಗೆ ಅವರು ಬರುವ ಸುದ್ದಿ ತಿಳಿಯಿತು.

ಈ ಸಂದರ್ಭದಲ್ಲಿ ಅವರನ್ನು ಮೈಸೂರು ಅಸೋಸಿಯೇಷನ್ನಿಗೆ ಆಮಂತ್ರಿಸಿ, ಅದೇ ಹೊತ್ತಿಗೆ ಚಿತ್ರಕಲೆಗೆ ಸಂಬಂಧಿಸಿದ ವಿಶಿಷ್ಟ ಕಾರ್ಯಕ್ರಮವೊಂದನ್ನು ಹಮ್ಮಿಕೊಳ್ಳುವ ಯೋಜನೆ ತಯಾರಾಯಿತು. ನಮ್ಮ ಮುಂಬಯಿಯ ಯುವ ಕಲಾವಿದ ಜಯ ಸಾಲ್ಯಾನ್ ಈ ಕಾರ್ಯಕ್ರಮದ ಹೊಣೆ ಹೊರಲು ಮುಂದೆ ಬಂದರು. ಮೈಸೂರು ಅಸೋಸಿಯೇಷನ್ನಿನ ಮುಂದಾಳುತ್ವ ವಹಿಸಿದ ಈ ಕಾರ್ಯಕ್ರಮಕ್ಕೆ ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗ, ಬಿ.ಎಸ್.ಕೆ.ಬಿ.,. ಕರ್ನಾಟಕ ಸಂಘ, ಎನ್.ಕೆ.ಇ.ಎಸ್. ಸಂಸ್ಥೆಗಳು ಕೈ ಜೋಡಿಸಲು ಒಪ್ಪಿದವು.

ಈ ಕಾರ್ಯಕ್ರಮದ ಅಂಗವಾಗಿ 23 ರ ಭಾನುವಾರ ಮಹಾರಾಷ್ಟ್ರದ ವಿವಿದೆಡೆಯಿಂದ ಬಂದ ಸುಮಾರು 67 ಜನ ಕಲಾವಿದರು ಸಯಾನ್, ಮಾತುಂಗಾ ಉಪನಗರಗಳನ್ನು ವಸ್ತುವಾಗಿಟ್ಟು ಕೊಂಡು Landscape Competitionನಲ್ಲಿ ಉತ್ಸಾಹದಿಂದ ಭಾಗವಹಿಸಿದರು. ನಾಸಿಕ್‌ನ ಖ್ಯಾತ ಚಿತ್ರಕಲಾವಿದ ಶ್ರೀ. ಅನಿಲ್ ಅಭಂಗೆಯವರು ತೀರ್ಪುಗಾರರಾಗಿ ವಿಜೇತರನ್ನು ಆಯ್ಕೆ ಮಾಡಿಕೊಟ್ಟರು.

ಇದೇ ಕಾರ್ಯಕ್ರಮದ ಮುಂದುವರೆದ ಭಾಗವಾಗಿ 29ನೆಯ ಜೂನ್ ಶನಿವಾರದಂದು ಅಸೋಸಿಯೇಷನ್ನಿನಲ್ಲಿ ಖ್ಯಾತ ಕಲಾವಿದರ ಚಿತ್ರಕಲಾ ಪ್ರದರ್ಶನ ಏರ್ಪಡಿಸಲಾಗಿತ್ತು. ಶ್ರೀ. ಎಸ್. ಜಿ. ವಾಸುದೇವ್ ಉದ್ಘಾಟಿಸಿದ ಈ ಕಾರ್ಯಕ್ರಮ ದಲ್ಲಿ ಮುಂಬಯಿಯ ಖ್ಯಾತ ಕಲಾವಿದರುಗಳಾದ ಶ್ರೀ. ದಿವಾಕರ ಶೆಟ್ಟಿ, ಹಾಗೂ ಶ್ರೀ. ದೇವದಾಸ ಶೆಟ್ಟಿಯವರು ಭಾಗವಹಿಸಿದ್ದರು. ಈ ಮೂವರೂ ತಮ್ಮ ತಮ್ಮ ಸುದೀರ್ಘ ಕಲಾ ಜೀವನದ ಏಳು ಬೀಳುಗಳನ್ನು ಸಭಿಕರೊಂದಿಗೆ ಹಂಚಿಕೊಂಡರು. ಚಿತ್ರಕಲಾ ಪ್ರದರ್ಶನದಲ್ಲಿ ಕಳೆದವಾರ ನಡೆದ Landscapre Paintingನಲ್ಲಿ ವಿಜೇತ ಚಿತ್ರಗಳಲ್ಲದೆ, ಖ್ಯಾತ ನಾಮರಾದ ಕನ್ನಡ ಕಲಾವಿದರಾದ ಶ್ರೀ. ಕೆ. ಕೆ. ಹೆಬ್ಬಾರ್, ಶ್ರೀ. ಸುವರ್ಣ ಹಿರೇಮಠ್, ಶ್ರೀ. ದಿವಾಕರ ಶೆಟ್ಟಿ, ಶ್ರೀ. ದೇವುದಾಸ ಶೆಟ್ಟಿ, ಶ್ರೀ. ವಾಸುದೇವ ಕಾಮತ್ ಇವರ ಚಿತ್ರಗಳು, ಭಿತ್ತಿ ಚಿತ್ರಗಳು, ಖ್ಯಾತ ವ್ಯಂಗ್ಯಚಿತ್ರಕಾರ ಶ್ರೀ. ಪಂಜು ಗಂಗೊಳ್ಳಿಯವರ ವ್ಯಂಗ್ಯ ಚಿತ್ರಗಳು, ಉದಯೋನ್ಮುಖ ಕಲಾವಿದ ಶ್ರೀ. ಜಯ ಸಾಲ್ಯಾನರ ketch ಹಾಗೂ ಚಿತ್ರಗಳು ಇದ್ದವು.



ಚಿತ್ರಕಲಾ ಪ್ರದರ್ಶನವನ್ನು ಶ್ರೀ. ಎಸ್. ಜಿ. ವಾಸುದೇವ್ ಅವರು ಮತ್ತು ಇತರ ಗಣ್ಯರು ವೀಕ್ಷಿಸುತ್ತಿರುವುದು.




ತಾರೀಖು 29.06.2019ರಂದು ನಡೆದ ಚಿತ್ರಕಲಾ ಪ್ರದರ್ಶನದ ಉದ್ಘಾಟನಾ ಸಮಾರಂಭವನ್ನು ಉದ್ದೇಶಿಸಿ ಶ್ರೀ ಕೆ. ಮಂಜುನಾಥಯ್ಯನವರು ಮಾತನಾಡುತ್ತಿರುವುದು.

ಇದೇ ದಿನ ಸಯಾನ್, ಮಾತುಂಗಾ, ಪ್ರದೇಶದ ಶಾಲೆಯ ಮಕ್ಕಳಿಗಾಗಿ ನಡೆಸಿದ ಸ್ಥಳದಲ್ಲಿಯೇ ಚಿತ್ರ ಬರೆಯುವ ಸ್ಪರ್ಧೆಯಲ್ಲಿ 65 ಸ್ಪರ್ಧಿಗಳು ಭಾಗವಹಿಸಿದ್ದರು.

30ರ ಜೂನ್ ಮಧ್ಯಾಹ್ನ ಬಹುಮಾನ ವಿತರಣಾ ಸಮಾರಂಭದಲ್ಲಿ




ನೇಸರು ವಿಶೇಷ ಸಂಚಿಕೆಯ ಬಿಡುಗಡೆ



ಚಿತ್ರಕಲಾ ಸ್ಪರ್ಧೆಯಲ್ಲಿ ನಿರತರಾದ ವಿದ್ಯಾರ್ಥಿಗಳು




ಚಿತ್ರಕಲಾ ಸ್ಪರ್ಧೆಯಲ್ಲಿ ನಿರತರಾದ ವಿದ್ಯಾರ್ಥಿಗಳು

ಶ್ರೀಯುತ ಪಂಜು ಗಂಗೊಳ್ಳಿಯವರು ಆಗಮಿಸಿ ಬಹುಮಾನ ವಿತರಣೆ ಮಾಡಿದರು.

ಅತ್ಯಂತ ಚೆನ್ನಾಗಿ ನೆರವೇರಿದ ಈ ಕಾರ್ಯಕ್ರಮಕ್ಕೆ ಒಂದೇ ಕೊರತೆ ಎಂದು ಬಹುಷಃ ಜಡಿಮಳೆಯ ಕಾರಣ ಸಭಿಕರು, ಕಲಾ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸದೇ ಇದ್ದದ್ದು.

ಈ ಸಂಪೂರ್ಣ ಕಾರ್ಯಕ್ರಮಕ್ಕೆ ಸಾರಥ್ಯವಹಿಸಿ ಶ್ರೀ ಜಯ ಸಾಲ್ಯಾನ್ ಅವರಿಗೆ ಅಸೋಸಿಯೇಷನ್ ಹೃದಯ ತುಂಬಿ ವಂದಿಸುತ್ತದೆ ಹಾಗೆಯೇ ನಮ್ಮೊಂದಿಗೆ ಕೈ ಜೋಡಿಸಿದ ಸಂಸ್ಥೆಗಳನ್ನು ಕೂಡ ಅಸೋಸಿಯೇಷನ್ ಸ್ಮರಿಸುತ್ತದೆ

## ಶ್ರೀ. ವಾಸುದೇವ ಕಾಮತ್‌ರವರ ಚಿತ್ರಗಳ ಪ್ರದರ್ಶನ








## ಶ್ರೀ. ದೇವುದಾಸ ಶೆಟ್ಟಿಯರ ಚಿತ್ರಗಳ ಪ್ರದರ್ಶನ






## ಶ್ರೀ. ದಿವಾಕರ ಶೆಟ್ಟಿಯರ ಚಿತ್ರಗಳ ಪ್ರದರ್ಶನ






## ಶ್ರೀ. ಪಂಜು ಗಂಗೊಳ್ಳಿಯವರ ಚಿತ್ರಗಳ ಪ್ರದರ್ಶನ






## ಶ್ರೀ. ಜಯ ಸಾಲ್ಯಾನ್‌ರವರ ಚಿತ್ರಗಳ ಪ್ರದರ್ಶನ





## ಶ್ರೀಮತಿ ಹಿರೆಮಠ ಅವರ ಚಿತ್ರಗಳ ಪ್ರದರ್ಶನ

## LANDSCAPE PAINTING COMPETITION - 2019 WINNERS

| Sr.No. | Name | Prize |
|---|---|---|
| 1 | Bibhishan Mhatre | I |
| 2 | Akshay Dange | II |
| 3 | Akshay Anandrao Patil | III |
| 4 | Ajit Shankar Raut | Consolation |
| 5 | Vaishnavi Dhargalkar | Consolation |

## DRAWING COMPETITION - 2019 WINNERS

| Sr.No. | Name | School Name | Prize |
|---|---|---|---|
| 1 | Priti Ghanshyam Choudhari | National Kannada Education Society High School, Wadala | I |
| 2 | Ritesh Mahendra Gupta | Hindi High School, Ghatkopar (W) | II |
| 3 | Muskan S. Savda | Banyan Tree High School, Matunga | III |
| 4 | Aastik Ajay Pol | The Dadar Parsee Youths Assembly High School, Matunga | Consolation |
| 5 | Shaikh Aqusa Tariq | Shri Sanatan Dharma High School - GTB Nagar, Antop Hill | Consolation |
| 6 | Sanchita Sandeep Tambe | Shiv Shikshan Sanstha's Secondary English Medium School, Sion | Encouragement |
| 7 | Tirtha Arun Kanade | The Dadar Parsee Youths Assembly High School, Matunga | Encouragement |
| 8 | Manjika Gopal Borkar | The Dadar Parsee Youths Assembly High School, Matunga | Encouragement |
| 9 | Abdul Tawab Shaikh | Shri Sanatan Dharma High School - GTB Nagar, Antop Hill | Encouragement |

# Prize Winners of Landscape Competition -


1st Prize

Mr. Bibhishan Mhatre









2nd Prize

Mr. Akshay Dange



3rd Prize:

Mr. Akshay Patil





Consolation - 1 : Mr. Ajit Shankar Raut



Consolation - 2 : Ms. Vaishnavi Dhargalkar

# DRAWING COMPETITION - 2019 WINNERS

**I Prize:**

**Priti Ghanshyam Choudhari,**

**National Kannada Educaion Society High School, Wadala**






**2nd Prize:**

**Ritesh Mahendra Gupta**

**Hindi High School, Ghatkopar (W)**






**3rd Prize:**

**Muskan S. Savda**

**Banyan Tree High School, Matunga**








***Consolation - 1***

**Aastik Ajay Pol**

**The Dadar Parsee Youths Assembly High School, Matunga**




***Consolation -2***

**Shaikh Aqusa Tariq**

**Shri Sanatan Dharma High School-GTB Nagar, Antop Hill**



# ENCOURAGEMENT PRIZES





**1. SANCHITA SANDEEP TAMBE**
**Shiv Shikshan Sanstha's Secondary English Medium School, Sion**





**TIRTHA ARUN KANADE**
**The Dadar Parsee Youths Assembly High School, Matunga**





**2. MANJIKA GOPAL BORKAR**
**The Dadar Parsee Youths Assembly High School, Matunga**





**3. ABDUL TAWAB SHAIKH**
**Shri Sanatan Dharma High School - GTB Nagar, Antop Hill**






**4. NILAKSHI SUDHIR SHELAR**
**National Kannada Educaion Society High School, Wadala**

# ಹೊಯ್ಸಳರ ದೇವಾಲಯಗಳು



ಎಂ.ವಿ.ಎಸ್.ಪ್ರಸಾದ್

ಹೊಯ್ಸಳರ ದೇವಾಲಯಗಳಿಗೆ ತಮ್ಮದೇ ಆದ ಒಂದು ವಿಶಿಷ್ಟ ಶೈಲಿ ಇದೆ. 11 ರಿಂದ 14ನೆಯ ಶತಮಾನದ ಕಾಲವು, ಕರ್ನಾಟಕದಲ್ಲಿ ಹೊಯ್ಸಳರ ಆಳ್ವಿಕೆ ಇದ್ದ ಕಾಲ. ಈ ಕಾಲದಲ್ಲಿ ಹೊಯ್ಸಳ ಅರಸರು ಕಲೆಗೆ ಪ್ರಾಮುಖ್ಯತೆ ಕೊಟ್ಟು ಅನೇಕ ದೇವಾಲಯಗಳನ್ನು ಕಟ್ಟಿಸಿದರು. ಹೊಯ್ಸಳರ ದೇವಸ್ಥಾನವೆಂದರೆ ನಮ್ಮ ಮನಸ್ಸಿನಲ್ಲಿ ಮೂಡುವುದು ಬೇಲೂರು ಹಳೇಬೀಡಿನ ದೇವಾಲಯಗಳ ಚಿತ್ರವೇ. ಆದರೆ, ಇವಲ್ಲದೆ ಇನ್ನೂ ಅನೇಕ ದೇವಾಲಯಗಳನ್ನು ಹೊಯ್ಸಳ ಅರಸರು ನಾಡಿನಾದ್ಯಂತ ಕಟ್ಟಿಸಿದ್ದಾರೆ. ಇವುಗಳನ್ನು ನಾವು ಸೋಮನಾಥಪುರ, ಬೆಳವಾಡಿ, ಅಮೃತಪುರ, ಹೊಸ ಹೊಳಲು, ಮೊಸಳೆ, ಅರಸಿಕೆರೆ, ಬಸರಲು, ಕಿಕ್ಕೇರಿ ಮತ್ತು ನುಗ್ಗೇಹಳ್ಳಿ ಇತ್ಯಾದಿ ಅನೇಕ ಸ್ಥಳಗಳಲ್ಲಿ ಕಾಣಬಹುದು. ಹೊಯ್ಸಳರು ಕಟ್ಟಿದ ದೇವಾಲಯಗಳಲ್ಲಿ ಇಂದಿಗೆ ಉಳಿದಿರುವುವು ಸುಮಾರು 300 ಎಂದು ಹೇಳುತ್ತಾರೆ. ಶಾಸನಗಳಲ್ಲಿ ಇನ್ನೂ ಅನೇಕ ದೇವಾಲಯಗಳ ಉಲ್ಲೇಖವಿದೆ. ಆದರೆ ನಮ್ಮಲ್ಲಿ 70 ದೇವಾಲಯಗಳ ಬಗ್ಗೆ ಮಾತ್ರ ದಾಖಲೆಗಳಿವೆ. ಇವಲ್ಲಿ ಹೆಚ್ಚು ಪಾಲು ಮಲನಾಡು ಪ್ರದೇಶದಲ್ಲಿವೆ.



12ನೇ ಶತಮಾನಕ್ಕೆ ಮುಂಚೆ ಕಟ್ಟಿರುವ ದೇವಾಲಯಗಳಲ್ಲಿ ನಾವು ಚಾಲುಕ್ಯರ ಶೈಲಿಯನ್ನು ಕಾಣಬಹುದು. ಆದರೆ ನಂತರ ಕಟ್ಟಿದ ದೇವಾಲಯಗಳಲ್ಲಿ ಸೃಜನಾತ್ಮಕವಾದ ಬದಲಾವಣೆಗಳನ್ನು ನಾವು ಕಾಣುತ್ತೇವೆ. ಹೊಯ್ಸಳರು ತಮ್ಮ ದೇವಾಲಯಗಳಲ್ಲಿ ಹೆಚ್ಚಿನ ಅಲಂಕಾರಿಕ ಅಂಶಗಳನ್ನು ಅಳವಡಿಸಿಕೊಂಡರು. ಇವರ ಶಿಲ್ಪಗಳಲ್ಲಿ

ಆಭರಣಗಳನ್ನು ಸುಂದರವಾಗಿ ಬಿಡಿಸಿರುವುದನ್ನು ನಾವು ಕಾಣ ಬಹುದು. ದೇವಸ್ಥಾನಗಳಲ್ಲಿರುವ ಶಾಸನಗಳಲ್ಲಿ ಅದನ್ನು ಕಟ್ಟಿದ ಕಾರಣವೇನು, ಅದಕ್ಕೆ ದಾನಿಗಳು ಯಾರು, ಅದರಲ್ಲಿ ದೇವರನ್ನು ಪ್ರತಿಷ್ಠಾಪಿಸಿದ್ದುದು ಯಾವಾಗ, ಅದನ್ನು ನಡೆಸಿಕೊಂಡು ಹೋಗಲು ಕೊಟ್ಟಿರುವ ದೇಣಿಗೆ, ಇತ್ಯಾದಿ ಅನೇಕ ವಿವರಗಳಿವೆ.

ಹೊಯ್ಸಳ ದೇವಾಲಯಗಳು ಯಾವುದೇ ಒಂದು ಮತ ಅಥವಾ ಪಂಗಡಕ್ಕೆ ಸೀಮಿತವಾಗಿಲ್ಲ. ಇವು ಪ್ರಮುಖವಾಗಿ ಶಿವ ಮತ್ತು ವಿಷ್ಣು ದೇವಾಲಯಗಳು. ಶಿವನ ದೇವಾಲಯಗಳಲ್ಲಿ ಶಿವಲಿಂಗವನ್ನೂ ಮತ್ತು ವಿಷ್ಣು ದೇವಾಲಯದಲ್ಲಿ ವಿಷ್ಣುವಿನ ವಿವಿಧ ಅವತಾರಗಳನ್ನು ನಾವು ಕಾಣಬಹುದು.

ದೇವಾಲಯದ ಹೃದಯಭಾಗ ಗರ್ಭಗೃಹ. ಇದರಲ್ಲಿ ದೇವರ ಮೂರ್ತಿಯನ್ನು ಸ್ಥಾಪಿಸಿರುತ್ತಾರೆ. ಹೊಯ್ಸಳ ದೇವಸ್ಥಾನಗಳಲ್ಲಿ ಅದರ ವಿವಿಧ ಭಾಗಗಳು ಸೇರಿದಂತಿದ್ದು ಇಡೀ ದೇಗುಲವೇ ಒಂದಾಗಿ ಇರುತ್ತದೆ. ದಕ್ಷಿಣ ಭಾರತದ ಇತರ ಶೈಲಿಗಳಲ್ಲಿ ಈ ರೀತಿ ಇರುವುದಿಲ್ಲ. ಹೊಯ್ಸಳ ದೇವಸ್ಥಾನಗಳಲ್ಲಿ ಎಲ್ಲೆಲ್ಲೂ ನವಿರಾದ ಶಿಲ್ಪಗಳಿಂದ ಅಲಂಕಾರ ಮಾಡಿರುವುದನ್ನು ನಾವು ಕಾಣಬಹುದು. ಇವರು ಉಪಯೋಗಿಸಿರುವ ಬಳಪದ ಕಲ್ಲು ಈ ರೀತಿಯ ಕುಸುರಿ ಕೆಲಸಕ್ಕೆ ಬಹಳ ಸೂಕ್ತವಾಗಿದೆ. ಈ ಕಲ್ಲಿನಲ್ಲಿ ಇವರು lathe turned pillarಗಳನ್ನು ಮಾಡಿದ್ದಾರೆ. ದೇವಸ್ಥಾನಗಳು Star Shaped Platform, ನಕ್ಷತ್ರದಂತೆ ಮೂಲೆ ಮೂಲೆಗಳಿರುವ ಎತ್ತರದ ವೇದಿಕೆಯ ಮೇಲೆ ಇರುತ್ತವೆ.





ಈ ವೇದಿಕೆಯನ್ನು ಜಗತಿ ಎಂದು ಕರೆಯುತ್ತಾರೆ. ದೇವಸ್ಥಾನದ ಗೋಡೆಗಳು ಜಗತಿಯಂತೆಯೇ ಮೂಲೆ ಮೂಲೆಗಳಿಂದ ಕೂಡಿರುತ್ತವೆ ಮತ್ತು ಪ್ರದಕ್ಷಿಣೆ ಮಾಡಲು ಜಗತಿಯಲ್ಲಿ ಸ್ಥಳವಿರುತ್ತದೆ.

ಜಗತಿಯಿಂದ ಜನರು ಮಂಟಪಕ್ಕೆ ಹೋಗಬಹುದು. ಜಗತಿಯಲ್ಲಿ ಪ್ರದಕ್ಷಿಣೆ ಮಾಡುವಾಗ ಪಕ್ಕದಲ್ಲಿರುವ ಗೋಡೆಗಳ ಮೇಲೆ ನಮ್ಮ ಪುರಾಣಗಳನ್ನು ಆಧಾರಿತ ಶಿಲ್ಪಗಳನ್ನು ಕಾಣಬಹುದು. ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದಲ್ಲಿ ಮಾಡಿರುವ ರಾಮಾಯಣ ಮತ್ತು ಮಹಾಭಾರತದ ಚಿತ್ರಣದಂತೆ ನಮ್ಮ ದೇಶದ ಮತ್ತ್ಯಾವ ದೇಗುಲದಲಿಯೂ ಇಲ್ಲ ಎಂದು ಹೇಳುತ್ತಾರೆ. ಜಗತ್ತಿಲ್ಲದೆ ಕಟ್ಟಿರುವ ದೇವ-ಸ್ಥಾನದಲ್ಲಿ ಮಂಟಪಕ್ಕೆ ಹೋಗಲು ಮೆಟ್ಟಲುಗಳಿರುತ್ತವೆ. ಈ ಮೆಟ್ಟಲುಗಳ ಎರಡೂ ಪಕ್ಕದಲ್ಲಿ ಆನೆಗಳ ಕೆತ್ತನೆ ಇರುತ್ತವೆ. ಇದನ್ನು ನಾವು ಕೋರ್ವಾಂಗಲದ ದೇವಸ್ಥಾನದಲ್ಲಿ ಕಾಣಬಹುದು.



ಮಂಟಪವು ಭಕ್ತ ಜನರು ಸೇರಿ ಪೂಜೆಯನ್ನು ವೀಕ್ಷಿಸುವ ಸ್ಥಳ. ಆದ್ದರಿಂದ ಇದು ವಿಶಾಲವಾಗಿರುತ್ತದೆ. ಇದರಲ್ಲಿ ಒಂದು ಹೊರಗಿನ ಮಂಟಪ. ಇದು ಅನೇಕ ಕಂಭಗಳಿಂದ ಕೂಡಿ ವಿಶಾಲವಾಗಿರುತ್ತದೆ. ಇದರಿಂದ ಮತ್ತೊಂದು ಚಿಕ್ಕದಾದ ಒಳಗಿನ ಮಂಟಪಕೆ ದಾರಿ ಇದೆ. ಒಳಗಿನ ಮಂಟಪದಿಂದ ಗರ್ಭ ಗೃಹಕ್ಕೆ ಹೋಗಬಹುದು. ಹೊರಗಿನ ಮಂಟಪದಲ್ಲಿ ಸುಂದರವಾದ ಅಲಂಕಾರಿಕ ಶಿಲ್ಪವನ್ನು ಕಾಣಬಹುದು. ಹೊರಗಿನ ಮತ್ತು ಒಳಗಿನ ಮಂಟಪಗಳ ಮಧ್ಯದಲ್ಲಿ ಕಲ್ಲಿನಲ್ಲಿ ಕೆತ್ತಿರುವ ಜಾಲಿಗಳನ್ನು ಕಾಣಬಹುದು. ಇವು ಒಳಗಿನ ಮಂಟಪಕ್ಕೆ ಗಾಳಿ ಬೆಳಕು ಒದಗಿಸುವ ಕಿಟಕಿಗಳಂತೆ ಕೆಲಸ ಮಾಡುತ್ತವೆ. ಹೊರಗಿನ ಮಂಟಪದ ಕಂಭದ ಮೇಲೂ ಶಾಲಭಂಜಿಕೆ ಅಥವಾ ಮದನಿಕೆಯ ಶಿಲ್ಪವಿದೆ.

ಇದು ಹೊಯ್ಸಳ ಶೈಲಿಯ ವಿಶೇಷತೆ. ಈ ಬಾಲಿಕೆಯರ ಶಿಲ್ಪವು ಅತಿ ಸೂಕ್ಷ್ಮತೆಯಿಂದ ಅವರ ಕೇಶ ವಿನ್ಯಾಸ, ಆಭರಣಗಳು, ನಿಂತಿರುವ ಭಂಗಿ, ಮುಖದ ಭಾವ ಇತ್ಯಾದಿಗಳನ್ನು ಚಿತ್ರಿಸಿವೆ. ಮತ್ತೊಂದು ವಿಶೇಷವೆಂದರೆ ಇವಲ್ಲಿ ಪ್ರತಿಯೊಂದು ಶಿಲ್ಪವೂ ಅನನ್ಯ. ಒಂದರಂತೆ ಮತ್ತೊಂದು ಇಲ್ಲ.

ಹೊಯ್ಸಳ ದೇವಾಲಯಗಳಲ್ಲಿ ಒಂದರಿಂದ ಐದು ವಿಮಾನಗಳಿರುತ್ತವೆ. ಇದಕ್ಕೆ ಅನುಗುಣವಾಗಿ ಇವನ್ನು ಏಕಕೂಟ, ದ್ವಿಕೂಟ,... ಪಂಚಕೂಟ ಎಂದು ಕರೆಯುತ್ತಾರೆ. ಈ ವಿಮಾನಗಳಲ್ಲಿ ಅನೇಕ ಸುಂದರ ಕೆತ್ತನೆಯ ಕೆಲಸವನ್ನು ನಾವು ಕಾಣಬಹುದು. ಕಲ್ಲಿನಲ್ಲಿ ಕೆತ್ತಿರುವ ವಿಗ್ರಹಗಳು ಜೀವಂತವಾಗಿರುವಂತೆ ಕಾಣುತ್ತವೆ. ಕೆತ್ತನೆಯ ಕೆಲಸವು ಸೂಕ್ಷ್ಮವಾಗಿ ಇದ್ದು ಎಲ್ಲಾ ವಿವರಗಳನ್ನೂ ಸೂಚಿಸುತ್ತವೆ. ಈ ಉನ್ನತಮಟ್ಟದ ಕಲೆಯನ್ನು ನಾವು ಹೊಯ್ಸಳರ ದೇವಾಲಯಗಳಲ್ಲಿ ಮಾತ್ರ ಕಾಣಬಹುದು.

●

# ಮೇಘಸ್ಫೋಟ

**(ನೇಸರು ಕಥಾ ಸ್ಪರ್ಧೆಗೆ ಬಂದ ಕಥೆ)**



✍ ಸುನೀತ ಕುಶಾಲನಗರ
9902362234, 9538150488

ರಾತ್ರಿಯಿಡೀ ಸುರಿದ ಮಳೆ ಬೆಳಗ್ಗೆಯೂ ನಿಲ್ಲದೆ ಹಿಗ್ಗಾಮುಗ್ಗಾ ಬೀಸುವ ಗಾಳಿಯ ಧಾಳಿಗೆ ಸಿಕ್ಕಿ ಮತ್ತಷ್ಟು ಜೋರಾಯಿತು. ಎರಡು ತಿಂಗಳಿನಿಂದ ಬಿಡುವಿಲ್ಲದ ಮಳೆಗೆ ನಿಲ್ಲುವ ಮನಸ್ಸೇ ಇಲ್ಲ. ಆಕಾಶದೆಡೆ ಕಣ್ಣೆತ್ತಿ ನೋಡಿದರೆ ಹಿಂದೆಂದೂ ಕಂಡರಿಯದ ಭಯಾನಕ ಅವತಾರ. ಜೊತೆಗೆ ಇಂದೇಕೋ ಅಪರಿಚಿತ ಆತಂಕವೊಂದು ಅತಿಯಾಗಿ ಕಾಡುತ್ತಿದೆ. ಕೊಡಗಿನಲ್ಲಿ ಈ ಮಹಾಮಳೆ, ಬರೆಕುಸಿತ, ನೆರೆ, ಇವೆಲ್ಲವೂ ತನ್ನೊಬ್ಬಳ ಪಾಲಿಗೆ ಮಾತ್ರವೇ? ಆದರೂ ಕಾರಣವಿಲ್ಲದೆ ಕಾಡುವ ಸಂಕಟ, ಭಯ ಯಾಕೋ ತುಂಬಾ ಅಸ್ವಸ್ಥಗೊಳಿಸುತ್ತಿವೆ. ಹೊಟ್ಟೆಯೊಳಗಿನಿಂದ ಬಿಸಿಯುಸಿರುಪುಂಖಾನು ಪುಂಖವಾಗಿ ಏರುತ್ತಲೇ ಇದೆ. ಬೋಜಿ ತನ್ನ ಉಬ್ಬಿದ ಹೊಟ್ಟೆಯನ್ನು ಎರಡೂ ಕೈಗಳಿಂದ ಹಿಡಿದು ದೀರ್ಘ ನಿಟ್ಟುಸಿರು ಬಿಟ್ಟಳು.

'ಇವ ಎಷ್ಹೊತ್ತಿಗೆ ಬರುತ್ತಾನೋ? ಹತ್ತು ಗಂಟೆಗೆ ಕೂಡಿಗೆ ಆಸ್ಪತ್ರೆಗೆ ಹೋಗಬೇಕು. ಒಂಭತ್ತು ತಿಂಗಳು ತುಂಬಲು ಇನ್ನು ಕೇವಲ ಹತ್ತು ದಿನಗಳಷ್ಟೆ ಉಳಿದಿರುವುದರಿಂದ ಈ ಸಲ ಗಂಡನನ್ನೂ ಕರೆದುಕೊಂಡು ಬರಬೇಕೆಂದು ಡಾಕ್ಟರು ಹೇಳಿದ್ದಾರೆ. ವಾರದಿಂದ ಇಲ್ಲೇ ಇದ್ದವ ಅವ್ವ ಒಬ್ಬಳೇ, ಮಳೆಗೆ ಏನಾಯ್ತೋ, ನೋಡ್ಕೊಂಡು ಬರ್ತೀನಿ ಎಂದು ಹೋಗಿ ಮೂರು ದಿನಗಳಾಯಿತು.'ಆಸ್ಪತ್ರೆಗೆ ಹೊರಟು ಕುಳಿತು ಗಂಟೆ ಹನ್ನೊಂದೂ, ಹನ್ನೆರಡೂ ಕಳೆದಾಗ ಬೋಜಿಯ ಕಣ್ಣಲ್ಲಿ ನೀರು ಹನಿಯಿತು. ಈಗ ಏನು ಮಾಡಲೀ ? ಯೋಚಿಸುತ್ತಿದ್ದಂತೆ ಬಿಕ್ಕಳಿಸಿ ಅಳಬೇಕೆನಿಸಿತು. ಹೊಟ್ಟೆಯೊಳಗಿಂದ ಒಮ್ಮೆಲೆ ಮಗು ಒದ್ದಂಗೆ ಆಗಿ 'ನೀ ಚೇಷ್ಟೆ ಮಾಡು, ನಿನ್ನಪ್ಪ ಹೋದವ ಇನ್ನೂ ಬರಲೇ ಇಲ್ಲ ನೋಡು'ಎಂದು ಮೆಲ್ಲನೇ ಹೇಳುತ್ತಾ ಹೊಟ್ಟೆಯನ್ನೊಮ್ಮೆ ಸವರಿದಳು. ಕಾದು ಕಾದು ಸುಸ್ತಾಗಿ ಚಾಪೆ ಹಾಸಿ ಮಲಗಿದಾಗಲುದರದ ಕುಡಿಯ ಫುಟ್‌ಬಾಲ್, ಥ್ರೋಬಾಲ್ ಚಲನವಲನ ಅವಳನ್ನು ಅನುನಯಿಸಲೇ ಇಲ್ಲ. ಚಿತ್ತ ಸ್ಥಿಮಿತ ಕಳೆದು ಮುತ್ತನನ್ನೇ ಕಾಯುತ್ತಿದೆ. ಅವನ ಸಾಮಿಪ್ಯಕೊಡುವಷ್ಟು ಹಿತ ಬದುಕಿನಲ್ಲಿ ಇನ್ನೇನೂ ಇಲ್ಲ.

ಮಗ್ಗಲು ಬದಲಿಸಿ ಮಲಗಿದಾಗ ಹೊಟ್ಟೆಯನ್ನು ದೂಡಿ ಉಬ್ಬಿ ಬಂದ ಮಗುವಿನ ತಲೆ ನೋಡಿ ಅವಳಿಗೆ ದಿಗಿಲಾಯಿತು. ಮೆಲ್ಲನೆ ಕೈಯಿಂದ ನೇವರಿಸಿ ನೇವರಿಸಿ ಯಥಾಸ್ಥಿತಿಗೆ ಬಂದಾಗಲೇ ಸಹಜ ಉಸಿರು ದಕ್ಕಿದ್ದು. ಯೋಚನೆಗಳು ಮಕ್ಕಂದೂರಿಗೆ ಎಳೆಯೊಯ್ಯುತ್ತಿದೆ. ತಾನೂ ಅಲ್ಲೇ ಇರಬೇಕಿತ್ತು. ಬೆಟ್ಟದ ಮೇಲಿರುವ ಮಣ್ಣಿನ ಗೋಡೆಯ ಆ ಪುಟ್ಟ ಮನೆಗೆ ಮುತ್ತನ ಕೈ ಹಿಡಿದು ಹೋದಾಗಿನಿಂದ ಆ ಊರಿನಲ್ಲಿ ತಿರುಗದ ಕಾಡು ಮೇಡೇ ಇಲ್ಲ. ತೋಡಲ್ಲಿ ಸಿಗುವ ಮೀನು, ಏಡಿ, ಹಿಡಿದು ಬಗೆಬಗೆಯ ಹಲಸು, ಮಾವು, ತಡಸಲು, ನೇರಳೆ ತಿಂದಿದ್ದಕ್ಕಂತೂ ಲೆಕ್ಕವೇ ಇಲ್ಲ. ಅಲ್ಲಿನ ಮರ ಮರಗಳನ್ನೂ ಪರಿಚಯಿಸಿದ್ದ. ಹೆಜ್ಜೇನು ಸವಿದದ್ದೇ ಅಲ್ಲಿ. ಬೆಟ್ಟದ ತಪ್ಪಲಿನ ಸೀತೆ ಹೂಗಳನ್ನು ತೋರಿಸಿ ಬರುವಾಗ ಮರದ ಕೊಂಬೆಯಲ್ಲಿ ಕುಳಿತ್ತಿದ್ದ ಕೆಂಜಿರೆಗೆ ಕೇಟರ್ ಬಿಲ್‌ನಿಂದ ಹೊಡೆದು ತಂದು ಅವನೇ ಸಾರು ಮಾಡಿ ರುಚಿ ಹೇಗಿದೆ ಎಂದು ಕಣ್ಣು ಹೊಡೆದಿದ್ದ.ತಾನು ಗರ್ಭಿಣಿ ಎಂದು ತಿಳಿದ ತಕ್ಷಣ ಹಲಸಿನ ತೊಳೆಯನ್ನು ಜೇನಿನಲ್ಲಿ ಅದ್ದಿ ತಿನ್ನಿಸಿ, ಮುದ್ದಿಸಿದ್ದ.

ಅತ್ತೆಯಂತೂ ಎಲೆ, ಅಡಿಕೆ ಜೊತೆ ಜಾಸ್ತಿ ಕಡ್ಡಿಪುಡಿ ತಿಂದೂ ತುಟಿಯೆಲ್ಲಾ ಒಡೆದು ಒಡೆದು ಎಷ್ಟು ಬೇಡವೆಂದರೂ ಬಿಡಲ್ಲ. ಅದಕ್ಕೆ ಯಾವತ್ತೂ ಅಮ್ಮ ಮಗನದು ಜಗಳ. ಆದರೂ ವಾರಕ್ಕೆರಡು ಬಾರಿ ಬಾಟಲಿ ತಂದು ಕೊಡುತ್ತಾರೆ. ಅದು ಖಾಲಿಯಾಗುತ್ತಿದ್ದಂತೆ ಅತ್ತೆಯೊಳಗಿನ ಜೇನಿನಂತಹ ಜೇನುಕುರುಬ ಹಾಡುಗಳೆಲ್ಲಾ ಪುಂಖಾನುಪುಂಖವಾಗಿ ಹೊರ ಬರುತ್ತವೆ. ಅಲ್ಲೇ ಕೋಳಿಗೂಡಿನ ಮೇಲೆ ಮಲಗಿ ಹಾಡುತ್ತಾ ಕೊನೆಗೆ 'ಜೇನು ಕುರುಬರ ಮಕ್ಕಳು ನಂಗಾ ಧೂರಿ... ಧೂರಿ...' ಸಾಲುಗಳಲ್ಲಿ ನಿದ್ದೆ ಹತ್ತಿ ಗೊರಕೆಯಾಗಿ ಹೊರಬರುತ್ತದೆ.

ಏನೇ ಆದರೂ ಬೆಳಗ್ಗೆ ಮಾತ್ರ ಬೇಗ ಎದ್ದು ಹಂದಿ, ಕೋಳಿಗಳ ಕೆಲಸ ಶುರು ಹಚ್ಚಿಕೊಂಡು ಮನೆಯ ಸುತ್ತಾ ಓಡಾಡುತ್ತಾ ಅಂಗಳಕ್ಕೆ ಸೆಗಣಿ ಸಾರಿಸಿ ಬಿಡುತ್ತಾರೆ. ಬರುವವರೆಲ್ಲಾ ಅದರಿಂದಾಚೆ ಚಪ್ಪಲಿ ಬಿಚ್ಚಿ ಬರಬೇಕಿತ್ತು. ಹಾಕೊಂಡೇನಾದರೂ ಬಂದರೆ ಮುಲಾಜಿಲ್ಲದೆ 'ನಂಗಾ ಬಡವರು ಅಂತ ಚಪ್ಪಲೀಲೆ ಬರೋದಾ... ಉ ಊಂ... ಇವರ ಆಟ ನೋಡ್'ಎಂದು ಗೊಣಗುತ್ತಿದ್ದರು.

ಚೂ... ಚೂ.. ಎಂದು ಅತ್ತೆ ಕೈತೋರಿಸಿ ಬೊಬ್ಬಿಟ್ಟರೆ ಸಾಕು ಕರಿಯ ಓಡಿ ಬಿಡುತ್ತಿದ್ದ. ಅದು ಆ ಗುಳ್ಳೇ ನರಿ ಕಾಟಕ್ಕೆ. ಕೋಳಿ ಹಿಡಿಯಲು ಕಳ್ಳ ಹೆಜ್ಜೆ ಇಡುತ್ತಾ ಬಂದಾಗ ಕೋಳಿಗಳು ಕೋ...ಕೋ ಭಯದ ಕೋರಸ್‌ನಲ್ಲಿ ಅರಚಿ ಓಡುವಾಗ ಕರಿಯ ಸದ್ದಿನೆಡೆ ಧಾವಿಸಿ ಗುಳ್ಳೆ ನರಿಯನ್ನು ಅಟ್ಟಿ ಬಂದು ಅತ್ತೆಯ ಕಾಲಿಗೆ ಸುತ್ತಿಕೊಂಡು ಕುಯ್... ಕುಯ್ ಕಥೆ ಹೇಳುತ್ತಿದ್ದ. 'ಕೂಳ್ ತಿಂದ್ಯೆಲಾ ? ಇನ್ನು ಯಾನ ?' ಪ್ರೀತಿಯಿಂದ ಗದರಿ ಮತ್ತೆ ಕೋಳಿ ಗೂಡಿನ ಮೇಲೆ ಆಸನ ಹಿಡಿದು ಎಲೆ, ಅಡಿಕೆ ಸುರುಟಿ ಅಗೆದು ತುಟಿ ಮಧ್ಯೆ ಬೆರಳಿಟ್ಟು ಉಗಿದು ಕಡ್ಡಿಪುಡಿ ಉಜ್ಜಿ ಬಾಯೊಳಗೆ ತುರುಕುವುದು, ಪಚಕ್ಕನೆ ಉಗಿಯುವುದು ಇದು ಗಳಿಗೆಗೊಮ್ಮೆ ನಡೆಯಲೇಬೇಕಿತ್ತು.

'ಬೋಜಿ... ಬೋಜಿ...'ಎಂದು ಬೊಬ್ಬಿಡುತ್ತಾ ಬಂದ ಅವ್ವ 'ಮಳೆಗೂ ಮಕ್ಕಂದೂರು ಮನೆಯಲ್ಲಾ ಉರುಳಿ ವಾತಾದಿಗೆ. ಬರೆ ಜಾರಿ ಎಲ್ಲಾ ನೆಲಸಮವಾದಿಗೆ. ದಾರಿಯೂ ಕಾಣಕಿಲ್ಲೆಯಂತೆ, ಅವನಿಗೂ ಪೋನು ಮಾಡು ಬೇಗ' ಎಂದು ಏದುಸಿರಿಡುತ್ತಾ ಒಂದೇ ಸಮನೆ ಬಡ ಬಡಿಸಿದರು. 'ಸುಮಾರು ಸಲಿ ಪೋನು ಮಾಡಿದ್ದೆ. ರಿಂಗ್ ಆಗಾ ಕಾಣಿ, ನಾ ಯಾನಾ ಮಾಡಲೀ ದ್ಯಾವಾ...' ಅಮ್ಮ ಮಗಳ ಅಳು ಕೇಳಿ ಹಾಡಿಯವರೆಲ್ಲಾ ಏನಾತು? ಎಂದು ಓಡಿ ಬಂದರು. ಸುದ್ದಿ ಕೇಳಿ ಎಲ್ಲರೂ ಅವರವರ ಮೊಬೈಲ್‌ನಿಂದ ಮುತ್ತನಿಗೆ ಕರೆ ಮಾಡಿದರೆ ಸಂಪರ್ಕವೇ ಸಿಗದೆ ಎಲ್ಲರಲ್ಲೂ ಭಯ ಹೆಚ್ಚಿಸಿತು. ಧಾವಿಸಿ ಬಂದ ಗ್ರಾಮ ಪಂಚಾಯ್ತಿ ಸದಸ್ಯ ಚಂದ್ರ ರೇಡಿಯೋದಲ್ಲಿ ಮಕ್ಕಂದೂರಿನದೇ ಸುದ್ದಿಯೆಂದು ಹಾಕಿದ.

ಕೊಡಗಿನ ನೆರೆ ಸಂತ್ರಸ್ಥರಿಗೆ ರೇಡಿಯೋ ಸಾಂತ್ವನ ನಿರಂತರ ಕಾರ್ಯಕ್ರಮ ಪ್ರಸಾರದಲ್ಲಿ ಮಕ್ಕಂದೂರಿನ ಕರುಳ ಹಿಂಡುವ ಆಘಾತಕಾರಿ ಸುದ್ದಿ. ಬೆಟ್ಟ ಗುಡ್ಡ, ಕಾಡು, ಕೊಲ್ಲಿ, ತೋಡುಗಳಿಂದ ಸುಂದರವಾಗಿದ್ದ ಮಕ್ಕಂದೂರು ಬರೆ ಕುಸಿದು ಮರುಭೂಮಿಯಂತಾಗಿದೆ. ಚೆಂದವಾಗಿದ್ದ ಜನರ ಬದುಕೀಗ ಚಿಂದಿಯಾಗಿದೆ. ಇದ್ದ ಒಂದು ತೋಡು ಮಾಯವಾಗಿ ಹೊಸ ಹೊಸ ಕೆನ್ನೀರಿನ ತೋಡುಗಳು ಹುಟ್ಟಿಕೊಂಡಿವೆ ಎಂಬ ಮಕ್ಕಂದೂರಿನ ಕರಾಳ ಕಥೆ ಪ್ರಸಾರವಾಗುತ್ತಿದೆ.

ಮನೆಗಳೂ ನೆಲಸಮವಾಗಿ ಅತಂತ್ರರಾದವರು, ಮಣ್ಣೊಳಗೆ ಕಾಣೆಯಾದವರು, ರಸ್ತೆಯಿಲ್ಲದೆ ಊರೇ ಮಣ್ಣೊಳಗೆ ಸೇರಿ ನಾಗಲೋಟ. ಎಲ್ಲರನ್ನು ಸುಂಟಿಕೊಪ್ಪ ಶಾಲೆಗೆ ಸಾಗಿಸಿ ಆಶ್ರಯ ಕಲ್ಪಿಸುತ್ತಿರುವ ವರದಿ, ಜೆಸಿಬಿ ಕಾರ್ಯಾಚರಣೆ, ಡ್ರೋನ್‌ಗಳ ಬಳಕೆ ಕಂಡೂ ಕೇಳರಿಯದ ಪದಗಳನ್ನು ಕೇಳಿ ಅರ್ಥವಾಗದೆ ಎಲ್ಲರೂ ಬೆಚ್ಚಿದರು. ಆದರೆ 'ಮುತ್ತ ಸುಂಟಿಕೊಪ್ಪ ಬಂದಿಲ್ಲೇ' ಎಂದು ಚಂದ್ರ ಕಡಾ ಖಂಡಿತವಾಗಿ ಹೇಳಿದಾಗ ಬೋಜಿ ತಲೆ ತಿರುಗಿ ಬಿದ್ದಳು.

ಇರುಳಾವರಿಸುತ್ತಿದ್ದಂತೆಯೇ ಸುರಿಯುತ್ತಿದ್ದ ಮಳೆಯಲ್ಲಿ ನೆನೆಯದಂತೆ ಜಗುಲಿಯಲ್ಲಿ ಎಲ್ಲರೂ ಒತ್ತೊತ್ತಾಗಿ ಕುಳಿತರು. ಯಾರೋ ಒಂದು ಮೂಲೆಗೆ ಬೆಂಕಿ ಹಾಕಿದರು. ಪ್ರಜ್ಞೆ ಕಳೆದುಕೊಂಡಂತೆ ಮಲಗಿದ್ದ ಬೋಜಿಗೆ ಆಗಾಗ್ಗೆ ನೀರು ಕುಡಿಸುವ ಪ್ರಯತ್ನ ಮಾಡಿದರೂ ಒಂದು ಹನಿಯನ್ನು ಒಳಗಿಳಿಸಲಾಗದೆ ಎಚ್ಚರವಾದಗಲೆಲ್ಲಾ ಮುತ್ತನ ಹೆಜ್ಜೆ ಸದ್ದಿಗೆ ಕಿವಿಯಾಲಿಸಿದಳು.

ಹನಿ ನೀರು ಕುಡಿಯದಿದ್ದರೂ ಬೋಜಿಗೆ ಹೊಟ್ಟೆ ತೊಳಸಿ ಸಂಕಟ ತಡೆಯಲಾಗದೆ ಇಬ್ಬರ ಕೈಗಳ ಆಸರೆ ಪಡೆದು ಅಂಗಳದಂಚಿನಲ್ಲಿ ಕುಳಿತಾಗ ತ್ರಾಣವಿಲ್ಲದಿದ್ದರೂ ಎಂದಿನಂತೆ ತಲೆಯೆತ್ತಿ ಆಕಾಶ ನೋಡಿದಳು. ಮುತ್ತ ಜೊತೆಯಲ್ಲಿಲ್ಲದ ರಾತ್ರಿಗಳಲೆಲ್ಲಾ ಹೀಗೆ ಮೂತ್ರ ಮಾಡಲು ಕುಳಿತಾಗ ಆಕಾಶ ನೋಡುತ್ತಾ ಬೆಳದಿಂಗಳ ಹೊದಿಕೆಯಡಿ ಅವನ ನೆನಪಿನಲಿ ರೋಮಾಂಚನಗೊಳ್ಳುತ್ತಿದ್ದಳು. ದುಃಖ ಉಮ್ಮಳಿಸಿ ಮತ್ತೊಮ್ಮೆ ಆಕಾಶವನ್ನು ದಿಟ್ಟಿಸಿ ನೋಡಿದಳು. ಮೋಡಗಳ ಕರಿ ಛಾಯೆ ಹಿಂದೆಂದೂ ಕಂಡಿಲ್ಲದಷ್ಟು ವಿಚಿತ್ರವಾಗಿದೆ. ಯಾವುದೋ ಭಯಾನಕ ಸೂತಕದ ಛಾಯೆಯದು. ಆ ಬೃಹತ್ ಮೋಡವನ್ನು ನೋಡ ನೋಡುತ್ತಿದ್ದಂತೆಯೇ... ಹೌದು, ಅದು ಸಿಂಹವೇ ಎಂದು ಕಣ್ಣು ಕಿರಿದು ಮಾಡಿ ಮತ್ತೊಮ್ಮೆ ಸೂಕ್ಷ್ಮವಾಗಿ ಗಮನಿಸಿದಳು. ಮೋಡದೊಳಗೆ ಸಿಂಹ ಕುಳಿತಿದೆಯೇ ? ಅಥವಾ ಮೋಡವೇ ಸಿಂಹವಾಗಿದೆಯೇ ! ಘರ್ಜಿಸುವಂತೆ ಕುಳಿತಿದೆ. ತಲೆ ತಿರುಗಿದಂತಾಗಿ ಕರೆತಂದ ಕೈಗಳೊಳಗೆ ಕುಸಿದಳು.

ಬೆಳಗಾನ ಸುರಿದ ಮಳೆಯೇನು ನಿಂತಿಲ್ಲ. ಹಾಡಿಯವರು ಕಾಫಿ ಕಾಯಿಸಿ ತಂದು ಅಮ್ಮ ಮಗಳಿಗೆ ಕುಡಿಸಿದರು. ಏನೇನೋ ಹೇಳಿ ಸಮಾಧಾನ ಮಾಡಲು ಪ್ರಯತ್ನಿಸಿದರು. ಅವ್ವಾ ಮಾತ್ರ 'ಯಾರ್‍ಯಾರಿಗೋ ಅಲ್ಲಿಗೆ ಹೋಗಿ ಏನಾತ್ ನೋಡಿ ಬಾರ್‍ನು, ವಿಚಾರಿಸೊಡು ಬಾರ್‍ನು' ಎಂದು ಹೇಳಿದಾಗ ಐದಾರು ಮಂದಿ ಹೊರಟು ನಿಂತರು.

ಜಗುಲಿಯ ಬದಿಯಲ್ಲಿ ಸೇರಿದ ಗಂಡಸರೆಲ್ಲಾ ಎಲ್ಲೆಲ್ಲಿ ಏನೇನಾಗುತ್ತಿದೆಯೆಂದು ರೇಡಿಯೋ ಕೇಳುತ್ತಾ ಬೀಡಿ ಸೇದಿಕೊಂಡು ಜಲಸ್ಫೋಟ, ಭೂಕುಸಿತದಿಂದ ಕೊಡಗಿನ ಬೇರೆ ಬೇರೆ ಊರುಗಳು ಕುಸಿಯುತ್ತಿರುವ ಬಗ್ಗೆ, ಸುಮಾರು ಜನ ಮಣ್ಣು ಅಡೀಲು ಸಿಕ್ಕಿಹಾಕೊಂಡಿದ್ದಾರಂತೆ ಎಂದುತಮಗನಿಸಿದಂತೆ ಮಾತನಾಡುತ್ತಿದ್ದಾರೆ.

ಮತ್ತೊಂದು ಮೂಲೆಯಲ್ಲಿ ಹೆಂಗಸರು ಕುಳಿತು ಬೋಜಿಯ ಅವ್ವನ ಜೊತೆ ಹೇಳಿದ್ದನ್ನೇ ಹೇಳಿಕೊಂಡಿದ್ದಾರೆ. 'ಮಗಳು ಹೆರಿಗೆಗಾಗಿ ಬಂದು ಉಳಿದೋಳಿಗೆ, ಮುತ್ತನ ನೆನಪುಗು ಕೂಸಾದರೂ ಉಳಿದೋಡಾದಿಗೆ, ಧೈರ್ಯದಿಂದ ಇರೊ' ಇದನ್ನೆಲ್ಲಾ ಕೇಳುತ್ತಾ ಏನು ಮಾಡುವುದೆಂದು ತೋಚದೆ ಗಲ್ಲಕ್ಕೆ ಕೈಕೊಟ್ಟು ದುಃಖದಿಂದ ಕುಳಿತ್ತಿದ್ದಾಳೆ ಅವ್ವ.

ಹಾಡಿಯ ಹರೆಯದ ಹೆಣ್ಣುಮಕ್ಕಳು ಮತ್ತೊಂದು ಮೂಲೆ ಸೇರಿ ತಮ್ಮ ಚೂಡಿದಾರದ ದುಪ್ಪಟವನ್ನು ತಲೆಗೆ ಹಾಕಿ ಮಂಡಿಯೂರಿ ಕುಳಿತು ಕಣ್ಮುಚ್ಚಿ ಪ್ರಾರ್ಥನೆ ಮಾಡುತ್ತಿದ್ದಾರೆ.

'ಓ ಕರ್ತರೇ, ಮೃತರಿಗೆ ವಿಶ್ರಾಂತಿಯ ದಯಪಾಲಿಸಿರಿ. ನಿತ್ಯ ಜ್ಯೋತಿಯು ಅವರ ಮೇಲೆ ಪ್ರಕಾಶಿಸಲಿ. ಗತ ಆತ್ಮಗಳು ನಿಮ್ಮ ಸನ್ನಿಧಿಗೆ ! ಅತಿ ಶೀಘ್ರವೇ ಸೇರಿಸಿ ಪ್ರಭುವೆ. ಬರಲಿರುವವರು ನರರೆಲ್ಲರೂ ಬಳಿಗೆ. ನಮ್ಮ ಪ್ರಾರ್ಥನೆ ಆಲಿಸಿ ಬಿಡದೆ !

ಏಸುವಿನೆಡೆ ಭಿನ್ನಹದ ಸಾಲುಗಳು ಮುಂದುವರೆದವು.

'ನಮ್ಮ ಜನಾಂಗಕ್ಕೇನು ಗೌರವ? ನಾನು ಕೂಡಾ ಚರ್ಚ್‌ಗೆ ಸೇರಿಕೊಳ್ಳಲು ಹೊರಟಿದ್ದೆ. ಅತ್ತೆ ಬಿಟ್ಟಿಲ್ಲ. ಅತ್ತೆಯನ್ನು ಬಿಟ್ಟು ಹೆರಿಗೆಗೆಂದು ಇಲ್ಲಿಗೆ ಬರಲೇ ಬಾರದಿತ್ತು' ಅರೆ ಪ್ರಜ್ಞಾವಸ್ಥೆಯಲ್ಲೂ ಬೋಜಿಗೆ ಅತ್ತೆಯ ನೆನಪಾಯಿತು. ಅವರ ಹಾಡು ಅಲ್ಲೇ ಎಲ್ಲೋ ಮೊಳಗಿ ಗಿರಕಿ ಹೊಡದಂತಾಯಿತು.

ಜೇನು ಕುರುಬರ ಮಕ್ಕಳು ನಂಗಾ ಧೂರಿ ಧೂರಿ
ನಂಗಾ ಕಾಡು ಕುರುಬರ ಮಕ್ಕಳೂ ಧೂರಿ ಧೂರಿ
ಗೆಡ್ಡೆ ಗೆಣಸು ತಿನ್ನೋರು ಧೂರಿ ಧೂರಿ
ನಂಗಾ ಮಾಂಸ ಗೀಂಸ ಬಿಡೋದಿಲ್ಲಾ ಧೂರಿ ಧೂರಿ...

ಅವಳು ಮೆಲ್ಲನೆ ಕಣ್ಣಾಡಿಸಿದಳು. ಮುತ್ತ ಬಂದು ಚಪ್ಪಲಿ ಬಿಚ್ಚಿದ ಸದ್ದು, ಕತ್ತೆತ್ತಿ ನೋಡಿ, ಭ್ರಮೆಯೆಂದು ತಿಳಿದಾಗ ಮತ್ತೆ ಚಲನಾಹೀನಳಾದಳು. ಜೋರು ಜೋರು ಮಾತುಗಳು ಎಲ್ಲಿಂದಲೋ ಕೇಳಿಸಿದಂತೆ ಕಣ್ಣು ಬಿಟ್ಟು ಕಿವಿಯಾಲಿಸಿದಳು. ಮುತ್ತ ಬಂದನೇ?

'ಆ ಊರುಗುವಾಗಲೇ ದಾರಿ ಇಲ್ಲೇ, ಮೊದ್ಲು ಊರಿತ್ತು ಅಂತ ಗೊತ್ತೇ ಆಕಿಲ್ಲೆ'ಊರು ಮೈದಾನದಂತೆ ಮಣ್ಣಿನ ರಾಶಿಯೊಳಗೆ ಸೇರಿದ ಕಥೆಯನ್ನು, ಹೋಗುವಾಗ ಪೊಲೀಸರು ತಡೆದು ವಾಪಾಸ್ಸು ಕಳುಹಿಸಿದ್ದನ್ನೂ, ಮುತ್ತ ಹಾಗೂ ಅಮ್ಮನನ್ನು ಹುಡುಕಿಕೊಡಿ ಎಂದು ಕೇಳಿಕೊಂಡಿದ್ದನ್ನೂ ಏದುಸಿರು ಬಿಡುತ್ತಾ ಹೇಳಿದಾಗ ಬೋಜಿಯಿಂದ ಆಕ್ರಂದನವೊಂದು ಹೊರಬಿತ್ತು.

ಮುಸ್ಸಂಜೆಯಾಗುತ್ತಿದ್ದಂತೆ ಮಳೆ ಸ್ವಲ್ಪ ನಿಧಾನವಾದರೂ ತುಂತುರು ಹಿತಕೊಡುವಂತಹದ್ದಾಗಿರಲಿಲ್ಲ. 'ಮತ್ತೆ ಮುತ್ತನೊಂದಿಗೆ ಬದುಕಲಾರನೆ? ನನ್ನ ಊರು, ಮನೆ, ಅತ್ತೆ...? 'ಅವಳ ಸೋತ ದೃಷ್ಟಿ ಮತ್ತೊಮ್ಮೆ ಆಕಾಶದೆಡೆಗೆ ಏರಿತು. 'ನಿನ್ನೆ ನೋಡಿದ ಅದೇ ಮೋಡದಲ್ಲಿ ಸಿಂಹ ಘರ್ಜಿಸುತ್ತಾ ಕುಳಿತ್ತಿದೆ. ಅದು ಮತ್ತಷ್ಟು ದಷ್ಟಪುಷ್ಟವಾಗಿ ಬೆಳೆದಿದೆ. ಬಾಯಿಬಿಟ್ಟು ಕುಳಿತಿರುವ ಸಿಂಹದ ಘರ್ಜನೆಯಂತೆ ಮಿಂಚೊಂದು ಹೊರಬಿತ್ತು. ಒಂದಲ್ಲಾ, ಎರಡಲ್ಲಾ... ಪದೇ ಪದೇ ಮಿಂಚಿನ ದಾಳಿ. ನೋಡನೋಡುತ್ತಿದ್ದಂತೆಯೇ ಅವಳಿಗೆ ತನ್ನ ತಲೆಯೊಳಗೆಯೇ ಮೇಘಸ್ಫೋಟವಾದಂತಾಗಿ ತಲೆಯನ್ನು ಗಟ್ಟಿಯಾಗಿ ಒತ್ತಿ ಹಿಡಿದಳು. ಮಿಂಚು ಸೊಂಟದಿಂದ ಹಾದು ಹೊಟ್ಟೆಗೂ ರವಾನಿಸುತ್ತಿದೆ. ಯಾರ್‍ಯಾರೋ ತನ್ನನ್ನು ಎತ್ತಿಕೊಂಡಿದ್ದಾರೆ. ಎಲ್ಲಿಗೋ ಒಯ್ಯುತ್ತಿದ್ದಾರೆ. ಅವರೊಳಗೆ ಮುತ್ತನಿದ್ದಾನಾ? ಅರೆ ಪ್ರಜ್ಞೆಯಲ್ಲೂ ಅವನ ಸ್ಪರ್ಶಕ್ಕಾಗಿ ಹಂಬಲಿಸಿ ಹಲುಬಿದಳು. ●

# ಚರಿತ್ರೆಯ ಪುಟಗಳನ್ನು ಹೊರಳಿಸಿ ನೋಡಿದಾಗ

✍ **ವನಜರಾಜನ್, ಬೆಂಗಳೂರು**

ಗತಕಾಲದಲ್ಲಿ ಜರುಗಿದ ಘಟನೆಗಳ ವಿವರ ನಮಗೆ 'ಚರಿತ್ರೆ' ಓದುವುದರಿಂದ ಮಾತ್ರ ತಿಳಿಯುವುದು. "ಚರಿತ್ರೆ" ಓದಲೇಬೇಕು, ಹಾಗಿಲ್ಲದಿದ್ದರೆ ಅದೇ ನಮಗೆ ಮರೆಯಲಾಗದಂತಹ ಪಾಠ ಕಲಿಸುತ್ತದೆ' ಎಂಬ ಹೇಳಿಕೆ ಒಂದಿದೆ. (Know about History or History will repeat) ಎಲ್ಲಾ ಕೇವಲ ಸತ್ಯಾಂಶಗಳಿಂದಲೇ ಕೂಡಿದೆ ಅಥವಾ ಹಲವಾರು ಘಟನೆಗಳು ನಡೆದೇ ಇಲ್ಲ ಎಂದೂ ಸಹ ಹಲವರು ಅನುಮಾನ ಪಡಬಹುದು. ಅದೇನೇ ಇರಲಿ, ಯಾರಿಗಾದರೂ ಬೆಟ್ಟೊಂದು ತೋರಿಸಿ, ಆರೋಪಗಳನ್ನು ಹೊರಿಸಿ, ಅನುಮಾನ ಮಾಡಿದ್ದೇ ಆದರೆ, ಉಳಿದ ನಾಲ್ಕು ಬೆರಳುಗಳು ನಿಮ್ಮನ್ನು ಗುರಿ ಮಾಡಿ ತೋರಿಸುತ್ತವೆ. ಮೊದಲನೆಯ ಮಹಾಯುದ್ಧದ ಸಮಯ, ಅಂದಿನ ಚರಿತ್ರೆಯ ಪುಟಗಳನ್ನು, ಹಿಟ್ಲರ್‌ನ ನರಮೇಧ, ಮಸಿ ಬಳಿದು ಕಪ್ಪಾಗಿಸಿತು ಎಂದಿಗೂ ಅದನ್ನು ಅಳಿಸಲು ಸಾಧ್ಯವೇ ಇಲ್ಲ' ಮಾನವನಾಗಿ ಹುಟ್ಟಿದವನು ಕ್ರೂರಿದಾನವನಾದರೆ ಅವನು ಸೃಷ್ಟಿಸುವ ಪ್ರಪಂಚ, ಅಂಧಕಾರವಾಗದೆ, ಬರಲು ಎಲ್ಲಿಂದ ಸಾಧ್ಯ? ಓದುಗನು ಬಿಳಿ ಪುಟಗಳನ್ನು ಹುಡುಕಿ ತೆಗೆಯಲು ಕಷ್ಟ ಪಡಬೇಕು. 1943ನಲ್ಲಿನ ಬೆಂಗಾಲ್‌ನ ಭೀಕರ ಬರಗಾಲಕ್ಕೆ ಕಾರಣಕರ್ತರು, ಯಾರೇ ಇರಬಹುದು. ಆದರೆ ಪರಿಣಾಮ ಏನಾಯಿತು? ಅಂದು ಆ ಕರಾಳ ಬರಗಾಲದಲ್ಲಿ ಮೂರು ಮಿಲಿಯನ್ ಜನ ಅಸು ನೀಗಿದರು. ಶ್ರೀಮಂತರ ಮೇಲೆ ತೆರಿಗೆ ಹೇರಿ, ಬಡತನ ಸಂಪೂರ್ಣವಾಗಿ ನಿರ್ಮೂಲ ಮಾಡಲು ಸಾಧ್ಯವೆಂದು ಇಂದು ಹಲವರು ಭ್ರಮೆಯಲ್ಲಿದ್ದಾರೆ. 'ಚರಿತ್ರೆ'ಯ ಪುಟಗಳನ್ನು ಸ್ವಲ್ಪ ಕಾಲ ತಿರುಗಿಸಿ ನೋಡಿದರೆ ತಿಳಿಯುತ್ತದೆ ನೈಜಸಂಗತಿ. ರಾಜ ಮಹಾರಾಜರುಗಳು, ಶ್ರೀಮಂತರು, (Noble) ತೆರಿಗೆ ಸಲ್ಲಿಸಿದ್ದು ಉಂಟೇ? ರೈತರು ಕಾರ್ಮಿಕರು, ಬಡತನ ರೇಖೆಯ ಕೆಳಗಿರುವವರಿಂದ ತೆರಿಗೆ ವಸೂಲಿ ಮಾಡಿ, ನಮ್ಮನ್ನಾಳಿದವರ ಮೋಜು, ಮಸ್ತಿಗೆ ಅವರ 'ಯುದ್ಧ'ಕ್ಕಾಗಿ ತಗಲುವ ಖರ್ಚು–ವೆಚ್ಚಗಳ ಕಡೆ ಹಣ ಹರಿದು ಹೋಗುತ್ತಿತ್ತು. ಕಾಲಾನುಕಾಲದಿಂದ ಇದು ನಡೆಯುತ್ತಾ ಬಂದಿದೆ. ತಿರುಗಿಸಿ ನೋಡಿ ಚರಿತ್ರೆಯ ಪುಟಗಳನ್ನು! ಆಳಿದ ಹೆಸರು ಪಡೆದ ಅನೇಕಾನೇಕ ರಾಜ. ಮಹಾರಾಜರು, ಜನಗಳ ಹಸಿವನ್ನು ನೀಗಿಸುವುದಕ್ಕೆ ಬದಲಾಗಿ, ಅವರ ಅನ್ನ ಕಾಳು ಕಿತ್ತುಕೊಂಡು, 'ಯುದ್ಧ' ದಲ್ಲಿದ್ದವರಿಗೆ ನೀಡಿ, ರೈತರನ್ನು ಮತ್ತಷ್ಟು ಭಿಕಾರಿಯಾಗಿ ಮಾಡಿದ ಕಥೆಗಳು ಅಪಾರ! ಪ್ರಕೃತಿ ಕರುಣೆ ತೋರಿಸಿ ಮಳೆ ಬಂದರೆ ಹೇಗೋ ಬದುಕಿ ಉಳಿದರು. ಮಳೆ ಬರದಿದ್ದರೆ, ನೊಣ, ಸೊಳ್ಳೆ, ಕ್ರಿಮಿಗಳಂತೆ ಅಳಿದುಹೋದರು.

ಲೆಕ್ಕ ಇರಿಸಿದವರು ಯಾರು? 1812ರಲ್ಲಿ ನೆಪೋಲಿಯನ್ ರಷ್ಯದ ಮೇಲೆ ದಂಡೆತ್ತಿ ಬಂದಾಗ, 'ರಷ್ಯ' ಯುದ್ಧವನ್ನು ಮೊಟಕುಗೊಳಿಸಿ, ಮಾಸ್ಕೋ (Mascow) ತ್ಯಜಿಸಿ, ಹೋಗುವಾಗ ಕುತಂತ್ರದಿಂದ (ಅಂದು ಇದು ಸಾಮಾನ್ಯವಾದ ಸಂಗತಿ ಎನಿಸಿತು) ದವಸ, ಧಾನ್ಯ, ಆಹಾರ ಎಲ್ಲವನ್ನೂ ಸುಟ್ಟು ಹೊರಟು ಹೋದರು. ರೈತರ ಸ್ಥಿತಿ ಗತಿ ಅಧೋಗತಿಯಾಯಿತು. ಈ ರಾಕ್ಷಸ ಕೆಲಸವನ್ನು ತಮ್ಮ 'ವಿಜಯ' ಅಂದುಕೊಂಡರಂತೆ. ಹಸಿವಿನಿಂದ ಸತ್ತವರ ಸಂಖ್ಯೆ ಎಣಿಸಲೂ ಇಲ್ಲ. ಯಾರಿಗೂ ಅದು ಬೇಕಾಗಿ ಇರಲಿಲ್ಲ. ಉಳ್ಳವರು ಹಾಗೂ ಇಲ್ಲದವರ ನಡುವಿನ ಕಂದಕ ಮುಚ್ಚಲು ಅತ್ಯವಶ್ಯಕವಾಗಿ ಬೇಕಾದ ದಯೆ, ಕರುಣೆ, ಎಲ್ಲಿ ಬರಬೇಕು, ಈ ದಾನವರಲ್ಲಿ? 1942–43 ನಾವು ಆಳ್ವಿಕೆಗೆ ಒಳಪಡದೆ, ಸ್ವಾತಂತ್ರ್ಯ ಲಭಿಸಿದಿದ್ದರೆ, ಬಂಗಾಲ್‌ನಲ್ಲಿ ಭೀಕರ ಬರಗಾಲ ಇರುತ್ತಿರಲಿಲ್ಲವೆಂಬ ಕೆಲವರ ಅಭಿಪ್ರಾಯವನ್ನು ಡಾ। ಸ್ವಾಮಿನಾಥನ್‌ರವರು ಅಲ್ಲಗಳೆಯುತ್ತಾರೆ. ಅದರಲ್ಲಿ ಹುರುಳಿಲ್ಲವೆಂಬುದು ಅವರ ಅಭಿಪ್ರಾಯ. ಪ್ರಕೃತಿಯ ಮೇಲೆ ಸ್ವಾರ್ಥದ ಉದ್ದೇಶಗಳಿಂದ ಮೇಲುಗೈ ಸಾಧಿಸಬೇಕೆಂದು ಹೊರಟರೆ, 'ಮಳೆ' ಬರದಿದ್ದರೆ 'ಬೆಳೆ' ಎಲ್ಲಿಂದ ಬರಬೇಕು? ಹೊಟ್ಟೆ ಹಸಿದರೆ ಮನುಷ್ಯ ಮೃಗನಾಗುತ್ತಾನೆ. 'ರೈತ'ನೇ ದೇಶದ ಬೆನ್ನೆಲುಬು. ಆ ಅನ್ನದಾತನನ್ನು ನಾವು ಪಾಲಿಸಬೇಕು. ಪೋಷಿಸಬೇಕು, ಪೂಜಿಸಬೇಕು. ಇದರಿಂದ ಕದನ, ಸಂಘರ್ಷಗಳು ತಪ್ಪಬಹುದು. ಇದೇ ರೀತಿಯ ಘಟನೆ 1942ರಲ್ಲಿ ಚೀನಾದ 'ಹೆನಾನ್'ನಲ್ಲಿ ಪುನರಾವರ್ತನೆಯಾಯಿತು. ಯುದ್ಧ ನಡೆಸಲು ಬಂದ, ಸಹಾಯವನ್ನು ಸೈನಿಕರಿಗಾಗಿ ಬದಿಗಿಟ್ಟು, 'ಭೀಕರ ಬರಗಾಲ'ದಲ್ಲಿ ಮೂರು ಮಿಲಿಯನ್ ಜನ ಸತ್ತರು. ಮೂಲ ಕಾರಣ ಹುಡುಕಬೇಕು, ಖಂಡಿತ ಹುಡುಕಲೇಬೇಕು. ದೇಶದ ಏಳಿಗೆಗೆ ಬಹಳ ಮುಖ್ಯವಾಗಿ ಆರ್ಥಿಕ ಪರಿಸ್ಥಿತಿ ಸುಧಾರಿಸಬೇಕು. ಇಂದಿನ (ಮಕ್ಕಳು) ಯುವಕರು, ನಾಳೆಯ ಭವಿಷ್ಯ, (ಇದು ನನ್ನ ಸ್ವಂತ ಅಭಿಪ್ರಾಯ), ಯುವಕರು (ಯುವತಿಯರು ಸಹ) ಹೆಚ್ಚು ಹೆಚ್ಚು ಹಳ್ಳಿಗಳಿಗೆ ಹೋಗಿ ಅಲ್ಲಿನ ಸ್ಥಿತಿಗತಿಯ ಪರಿಚಯ ಮಾಡಿಕೊಳ್ಳಬೇಕು. ಹಿರಿಯರು ಬೇಸಾಯದಲ್ಲಿ ತೊಡಗಿದ್ದರೆ, ಅವರ ಕೈ ಜೋಡಿಸಬೇಕು. ಮುಖ್ಯವಾಗಿ ವಿದ್ಯಾಭ್ಯಾಸದ ಬುನಾದಿ ಅರಿತವರ ಮಾರ್ಗದರ್ಶನ ಪಡೆದು, ನವೀನ ಮಾರ್ಗಗಳನ್ನು ಹುಡುಕಿ ಹೆಚ್ಚು ಹೆಚ್ಚು ಬೆಳೆ ಬೆಳೆಯಬೇಕು. ಗೊತ್ತುಗುರಿ ಇಲ್ಲದೆ, ನಗರಗಳಿಗೆ ಬಂದು ಇಲ್ಲಿನ ತಳಕು–ಬೆಳಕು, ಮೋಜಿನ ಜೀವನಕ್ಕೆ ಮರುಳಾಗಿರುವುದನ್ನು ದಿನನಿತ್ಯ ನೋಡುತ್ತಿದ್ದೇವೆ. ಮಳೆ ಇಲ್ಲ, ಅತ್ತ ಸಾಲ ಸೋಲ, ದುರಭ್ಯಾಸಗಳ ಸಂಗಡ, ಅಂಟು–ನಂಟು, ಇಂದಿನ ಯುವಕರು ವಿದ್ಯಾವಂತರಾಗಿ ಎಚ್ಚೆತ್ತು ಕೊಂಡರೆ ಮಾತ್ರ ನಾಳೆಯ ಭವಿಷ್ಯ ರೂಪಿಸಬಹುದು.

ರಾಜಕೀಯ, ಸಂಘರ್ಷಗಳಲ್ಲಿ ಸಿಕ್ಕಿ ಹಾಕಿಕೊಳ್ಳದೆ ಜಾಗರೂಕರಾಗಿರಬೇಕು. ಇಲ್ಲಿ ವಿವೇಕಾನಂದರು ಮುತ್ತಿನ ಮಾತುಗಳನ್ನು ನೆನಪು ಮಾಡಿಕೊಳ್ಳುವುದು ಸೂಕ್ತವಲ್ಲವೇ? "ಏಳಿ,... ಎದ್ದೇಳಿ ಗುರಿ ಮುಟ್ಟುವವರೆಗೆ" (Arise, awake and stop not till the goal is reached), ನಿಲ್ಲಬೇಡಿ'

ಡಾ. ಸ್ವಾಮಿನಾಥನ್ ಎಸ್. ಅಂಕಲೇಶ್ವರ್ ಐಯರ್‌ರವರ ಲೇಖನ ಓದಿದ ಮೇಲೆ ನನಗೆ ಅನಿಸಿದ್ದನ್ನು ಬರೆದು ಕಳುಹಿಸಿದ್ದೇನೆ" ಎಂದೋ ಓದಿದ 'ಚರಿತ್ರೆ' ನೆನಪಿಗೆ ಬಂದಿತು. ತಮಗೆ ಇಷ್ಟವಾಯಿತೆ?

●

## ಹಸಿರು ಗಾಜಿನ ಬಳೆಗಳೇ....

ವಜ್ರದ ಬಳೆಗಳು ಕೈಯನ್ನಲಂಕರಿಸಿದರೂ ಗಾಜಿನ ಬಳೆಯೇ ಶೃಂಗಾರ. ಅಸರ ನಿನಾದವೇ ಸಂಗೀತ. ನ್ಬಮ್ಮ ಸಂಪ್ರದಾಯಗಳು ಆಧುನಿಕ ಮುಖವಾಡದೊಂದಿಗೆ ನಿಧಾನಕ್ಕೆ ಮರೆಯಾಗುತ್ತಿರುವ ಖೇದವೂ ಕಾಡುತ್ತಿದೆ. ಸ್ನೇಹಿತರೇ ಜಾನಪದರು ಹಾಡಿದಂತೆ ಭಾಗ್ಯದ ಬಳೆಗಾರ ಹೋಗಿ ಬಾ ನನ್ನ ತವರಿಗೆ.. . ಎನ್ನುವ ಕಾಲ ಅಮತ್ತೆ ಬರಬಹುದೇ... ಕಾದು ನೋಡಬೇಕಷ್ಟೇ ಯಾಕೆಂದರೆ ನಾವು ಆಶಾವಾದಿಗಳು.

ಹಸಿರು ಗಾಜಿನ ಬಳೆಗಳೇ
ಸ್ತ್ರೀ ಕುಲದ ಶುಭ ಸ್ವರಗಳೇ
ಈ ಕೈಗಳಿಗೆ ಶೃಂಗಾರವೇ
ನೀವು ಘಲ್ಲೆಂದರೆ ಸಂಗೀತವೇ,......

## ಅಂತರಶಾಲಾ ಚಿತ್ರಕಲಾ ಸ್ಪರ್ಧೆಯಲ್ಲಿ ಪ್ರೀತಿ ಚೌಧರಿಗೆ ಪ್ರಥಮ ಸ್ಥಾನ

ಮಾಟುಂಗಾದ ಮೈಸೂರು ಅಸೋಸಿಯೇಷನ್, ವಡಾಲದ ರಾಷ್ಟ್ರೀಯ ಶಿಕ್ಷಣ ಸಮಿತಿ, ಸಾಯನ್ನಿನ ಬಿ.ಎಸ್.ಕೆ.ಬಿ. ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗ ಹಾಗೂ ಮಾಟುಂಗಾ ಕರ್ನಾಟಕ ಸಂಘದ ಸಹಯೋಗದೊಂದಿಗೆ ಜೂನ್ 29 ರಂದು 12 ರಿಂದ 15 ವರ್ಷ ವಯೋಮಿತಿಯ ವಿದ್ಯಾರ್ಥಿಗಳಿಗಾಗಿ ಜರುಗಿದ ಅಂತರ ಶಾಲಾ ಚಿತ್ರಕಲಾ ಸ್ಪರ್ಧೆಯಲ್ಲಿ ವಡಾಲದ ರಾಷ್ಟ್ರೀಯ ಕನ್ನಡ ಶಿಕ್ಷಣ ಸಮಿತಿಯ ಇಂಗ್ಲೀಷ್ ಮಾಧ್ಯಮದ ಎಂಟನೆಯ ತರಗತಿ ವಿದ್ಯಾರ್ಥಿನಿ ಪ್ರೀತಿ ಚೌಧರಿಯು ಪ್ರಥಮ ಸ್ಥಾನವನ್ನು ಪಡೆದಿದ್ದಾಳೆ.

ಮೈಸೂರು ಅಸೋಸಿಯೇಷನ್ನಿನ ಕಿರಿ ಸಭಾಂಗಣದಲ್ಲಿ ಮಕ್ಕಳ ಚಿತ್ರಕಲಾ ಸ್ಪರ್ಧೆಯ ಸಮಾರಂಭದಲ್ಲಿ ಪ್ರಖ್ಯಾತ ಚಿತ್ರಕಲಾಕಾರರಾದ ದೇವದಾಸ ಶೆಟ್ಟಿ, ದಿವಾಕರ ಶೆಟ್ಟಿ, ವಾಸುದೇವ ಕಾಮತ, ಪಂಜು ಗಂಗೊಳ್ಳಿ, ಜಯ ಸಾಲ್ಯಾನ್, ಎಸ್. ಜಿ. ವಾಸುದೇವ, ಇವರ ಆಕರ್ಷಕ ಚಿತ್ರಗಳನ್ನು ಪ್ರದರ್ಶಿಸಲಾಯಿತು.

ಸಮಾರೋಪ ಸಮಾರಂಭವು 30ರಂದು ಸಂಜೆ ಮೈಸೂರು ಅಸೋಸಿಯೇಷನ್ನಿನ ಸಭಾಗೃಹದಲ್ಲಿ ಜರುಗಿತು. ಸಂಸ್ಥೆಯ ವಿಶ್ವಸ್ಥರಾದ ಡಾ। ಬಿ. ಆರ್. ಮಂಜುನಾಥ, ಶ್ರೀ. ಕೆ. ಮಂಜುನಾಥಯ್ಯ ಹಾಗೂ ಕಾರ್ಯದರ್ಶಿ ಡಾ। ಗಣಪತಿ ಶಂಕರಲಿಂಗ ರವರೊಂದಿಗೆ ಹಿರಿಯ ಚಿತ್ರಕಲಾವಿದರು ವೇದಿಕೆಯಲ್ಲಿ ಉಪಸ್ಥಿತರಿದ್ದು, ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನವನ್ನು ವಿತರಿಸಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಎನ್.ಕೆ.ಇ.ಎಸ್ ಶಾಲೆಯ ಪ್ರೀತಿ ಚೌಧರಿ 500/– ನಗದಿನೊಂದಿಗೆ ಪ್ರಥಮ ಸ್ಥಾನವನ್ನು ಹಾಗೂ ನೀಲಾಕ್ಷಿ ಶೇಳಾರರವರು ಸಮಾಧನಕರ ಬಹುಮಾನದೊಂದಿಗೆ 1000/– ನಗದು ಪ್ರಶಸ್ತಿ ಪತ್ರವನ್ನು ಪಡೆದರು. ಈ ಚಿತ್ರೋತ್ಸವದಲ್ಲಿ 20ಕ್ಕೂ ಅಧಿಕ ಶಾಲೆಗಳು ಹಾಗೂ 65ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದು, ಈ ಕಾರ್ಯಕ್ಕೆ ಸಹಕರಿಸಿದ ಡಾ। ಅಮರೇಶ ಪಾಟೀಲ, ಚಿತ್ರಕಲಾ ಶಿಕ್ಷಕ. ಶಿವಯೋಗಿ, ಸಣ್ಣಮನಿ ಯವರನ್ನು ಮೈಸೂರು ಅಸೋಸಿಯೇಷನ್ನಿನ ಕಾರ್ಯದರ್ಶಿ ಗಣಪತಿ ಶಂಕರಲಿಂಗರವರು ಕೃತಜ್ಞತೆ ಸಲ್ಲಿಸಿದರೆ, ವಡಾಲಾ ರಾಷ್ಟ್ರೀಯ ಕನ್ನಡ ಶಿಕ್ಷಣ ಸಮಿತಿಯ ಅಧ್ಯಕ್ಷರಾದ ಪಾರ್ಥ ಸಾರಥಿಯವರು ವಿಜೇತರಾದ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

## ಎರಡಿಲ್ಲ / ಅದ್ವೈತ

ಬಯಕೆಗಳು ಎನಗಿಲ್ಲ
ಕೇಳಿಕೆಗಳು ಇನಿತಿಲ್ಲ
ನಿನ್ನಡಿಯ ನೆಳಲಲ್ಲಿ
ನಿಂದಿರಲು ತಂಪಿನಲಿ
ನಿನ್ ಹೊರತು ನಾನಿಲ್ಲ
ಎನ ಬಿಟ್ಟು ನೀನಿಲ್ಲ ॥

ಎಲ್ಲೆಲ್ಲಿ ನಾನಿರುವೆ
ಅಲ್ಲೆಲ್ಲಾ ನೀನಿರುವೆ
ಎಂದೆಂದೂ ನಾ ಇರಲು
ಅಳಿವಂತೂ ಎನಗಿಲ್ಲ
ನಿನ್ ಹೊರತು ನಾನಿಲ್ಲ
ಎನಬಿಟ್ಟು ನೀನಿಲ್ಲ ॥

ಜೀವ ಜಡ ಗೊಂದಲವು
ಎನಗಿಂಟೂ ಇಲ್ಲಿಲ್ಲ
ಎಲ್ಲವೂ ನಾ ಇರಲು
ಬೇರೆಯದಕೆ ಎಡೆಯಿಲ್ಲ
ನಿನ್ ಹೊರತು ನಾನಿಲ್ಲ
ಎನಬಿಟ್ಟು ನೀನಿಲ್ಲ ॥

ಪೊಡವಿಯೇ ಒಂದಿರಲು
ಎರಡಾಗಲೆಡೆಯಿಲ್ಲ
ನಾನೇ ನಾನಾಗಿರಲು
ನೀ.. ಅವಗೆ ತಾವಿಲ್ಲ
ನಿನ್ ಹೊರತು ನಾನಿಲ್ಲ
ಎನಬಿಟ್ಟು ನೀನಿಲ್ಲ.

**– ಡಾ. ಮಂಜುನಾಥ್**

# ಮೈಸೂರು ಅಸೋಸಿಯೇಷನ್, ಮುಂಬಯಿ

# THE MYSORE ASSOCIATION, BOMBAY

393, Bhau Daji Road, Matunga, Mumbai – 400 019.
Tel.:(022) 24024647/ 2403 7065 Website : www.mysoreassociation.in. E-mail : mysoreassociation.mumbai@gmail.com

## KARNATIC CLASSICAL MUSIC COMPETITION - 2019

### Competition – Rules & Regulations

**There will be 3 age groups:**
(1) 8 yrs to 13 yrs (13 completed as on 30.07.2019)
(2) 13 yrs. to 18 yrs. (18 Yrs completed as on 30.07.2019)
(3) 18 yrs & above

**Group I:**
Competition Date & Time: 17th August 2019 at 10.00 a.m
Each participant must sing in One Varna in Adi Taala (II nd Speed is must)
Any one Kriti of any Composers.
Must submit at least 3 Varnas in their entry form. Judges will ask to sing any one of them.
**Duration : 10 Minutes**

**Group II:**
Competition Date & Time : **17th August 2019 at 11.00 a.m**
One Atta Taala Varna
One Kruti of any Composers.
Must submit at least 2 varnas in Atta Taala in their entry form. Judges will ask to sing any one of them.
Duration : 15 minutes

**Group III:**
Competition Date & Time: **17th August 2019 at 2.30 p.m**
Raga Nerval Swara
One Kruti of any Composers
Must submit at least 3 Ragas in their entry form. Judges will ask to sing any one of the Ragas.
Duration: 20 Minutes

**Prizes in each group:**

| | | | | | | | |
|---|---|---|---|---|---|---|---|
| **1st Prize** | **-** | **Rs.** | **2,000/-** | **2nd Prize** | **-** | **Rs.** | **1,500/-** |
| **3rd Prize** | **-** | **Rs.** | **1,000/-** | **1 Consolation Prize** | **-** | **Rs.** | **500/-** |

Judges' decision is final. Judges can stop a participant at any time during the rendering. If participants in any group are less than 5, there will be no prize, only appreciation certificate will be given. Number of prizes will depend on number of entries in the group at the discretion of the Organizers. Last year 1st Prize winners are not eligible for the competition.

**Entry Fee: Rs. 100/-**

Entries have to be submitted at least 5 days before the competition day. No entries will be entertained on the same day. (NOTE: RESULTS WILL BE ANNOUNCED ON THE SAME DAY AND PRIZES WILL BE AWARDED AT THE CONCLUSION OF THE COMPETITION)

## ರಮಾ ಉಡುಪ ಅವರಿಗೆ ಪಿಎಚ್.ಡಿ ಪದವಿ



ಮುಂಬಯಿ: ಶ್ರೀಮತಿ ರಮಾ ಉಡುಪ ಅವರು ಬರೆದು ಸಲ್ಲಿಸಿದ 'ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಸಂಬಂಧಗಳ ಪರಿಕಲ್ಪನೆ' ಎನ್ನುವ ಮಹಾಪ್ರಬಂಧವನ್ನು ಮನ್ನಿಸಿ ಮುಂಬಯಿ ವಿಶ್ವವಿದ್ಯಾಲಯ ಅವರಿಗೆ ಕನ್ನಡದಲ್ಲಿ ಪಿ.ಎಚ್.ಡಿ ಪದವಿಯನ್ನು ನೀಡಿದೆ. ಅವರು ಕನ್ನಡ ವಿಭಾಗದ ಮುಖ್ಯಸ್ಥ ಡಾ. ಜಿ. ಎನ್. ಉಪಾಧ್ಯ ಅವರ ಮಾರ್ಗದರ್ಶನದಲ್ಲಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದರು.

ಕಳೆದ ನಾಲ್ಕು ದಶಕಗಳಿಂದ ಮುಂಬಯಿಯಲ್ಲಿ ನೆಲೆಸಿರುವ ರಮಾ ಅವರು ಮೂಲತಃ ವಿಜ್ಞಾನದ ವಿದ್ಯಾರ್ಥಿ. ಮೈಸೂರು ವಿಶ್ವವಿದ್ಯಾಲಯದಿಂದ ಬಿ.ಎಸ್.ಸಿ ಪಡೆದ ಇವರು ಮುಂಬಯಿಗೆ ಬಂದ ನಂತರ ಬಯೋಕೆಮಿಸ್ಟ್ರಿ ವಿಷಯದಲ್ಲಿ ಎಂ.ಎಸ್.ಸಿ. ಮಾಡಿ, ಶಿಕ್ಷಕ ವೃತ್ತಿಯಲ್ಲಿ ತೊಡಗಿಸಿಕೊಂಡರು. ಮೂವತ್ತೆರಡು ವರ್ಷ ಶಿಕ್ಷಕಿಯಾಗಿ ದುಡಿದ ಇವರು, ಕೊನೆಯ ಹದಿನೆಂಟು ವರ್ಷ ಘಾಟ್‌ಕೋಪರಿನ ಎಸ್.ವಿ.ಡಿ.ಡಿ ಇಂಗ್ಲಿಷ್ ಮೀಡಿಯಂ ಶಾಲೆಯಲ್ಲಿ ಮುಖ್ಯೋಪಾಧ್ಯಾಯಿನಿಯಾಗಿ ಕೆಲಸ ನಿರ್ವಹಿಸಿದ್ದಾರೆ. ಮಾಧ್ಯಮಿಕ ವಿಭಾಗದಲ್ಲಿ ಕೇವಲ ನೂರೆಪ್ಪತ್ತು ಮಕ್ಕಳಿಂದ ಪ್ರಾರಂಭವಾದ ಶಾಲೆ ಇವರು ನಿವೃತ್ತಿಯಾಗುವ ವೇಳೆಗೆ ಸಾವಿರದ ಐನೂರಕ್ಕಿಂತಲೂ ಹೆಚ್ಚಿಗೆ ಮಕ್ಕಳನ್ನು ಹೊಂದಿದ್ದು ಇವರ ಪರಿಶ್ರಮದ ದ್ಯೋತಕವಾಗಿದೆ. ನಿವೃತ್ತಿಯ ನಂತರ ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗ ಸೇರಿ ಎಂ.ಎಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಗೊಂಡು ನಂತರ ಸಂಶೋಧನೆಯನ್ನು ಕೈಕೊಂಡರು. ನಿವೃತ್ತಿಯ ನಂತರ ಕನ್ನಡದಲ್ಲಿ ಸಣ್ಣಕತೆ, ಪ್ರಬಂಧ, ವಿಮರ್ಶೆಗಳನ್ನು ಬರೆಯಲು ಪ್ರಾರಂಭಿಸಿದ ಇವರು ಮುಂಬಯಿಯ ಖ್ಯಾತ ಸಾಹಿತಿ, ವಿಜ್ಞಾನಿ ಡಾ. ವ್ಯಾಸರಾವ್ ನಿಂಜೂರರ ಕುರಿತು 'ಸಾಹಿತ್ಯ ವಿಜ್ಞಾನ ಸಮನ್ವಯಕ ವ್ಯಾಸರಾವ್ ನಿಂಜೂರು' ಎನ್ನುವ ಕೃತಿಯನ್ನು ರಚಿಸಿದ್ದಾರೆ. ಇದನ್ನು ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ ಪ್ರಕಟಿಸಿದ್ದು ಈ ಕೃತಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಭಾರತೀಯ ಭಾಷಾ ಸಂಸ್ಥಾನ ಮೈಸೂರಿನ ಪುರಸ್ಕಾರವೂ ಲಭ್ಯವಾಗಿದೆ.

# ಹೊಸ ನಂದಗೋಕುಲದಲ್ಲಿ ಕೃಷ್ಣನ ಎದಿರು ನೋಡುವುದಕ್ಕೆ

ಬಿ.ಎಸ್.ಕೆ.ಬಿ. ಅಸೋಸಿಯೇಷನ್ 1926ರಲ್ಲಿ ಮೊದಲಾಗಿ, ಮುಂಬಯಿಯ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಮುಂಚೂಣಿಯಲ್ಲಿದೆ. ಹಿಂದಿನ ಕಟ್ಟಡದಲ್ಲಿ, ಶ್ರೀ ಕೃಷ್ಣನ ಪ್ರತಿಷ್ಠಾಪನೆಯಾಗಿದ್ದು ಕಳೆದ 10 ವರ್ಷಗಳ ಕಾಲ ಸತತವಾಗಿ ಪೂಜೆ ನಡೆದಿದೆ. ಕಾಲಕಾಲಕ್ಕೆ ಕಲ್ಲು ಮಣ್ಣಿನ ಕಟ್ಟಡ, ಸಡಿಲವಾಗುವುದು



ಎಲ್ಲರ ಅನುಭವ. ಆದರೆ ಬಿ.ಎಸ್.ಕೆ.ಬಿ ಸದಸ್ಯರೇ ಅದರ ತಳಹದಿಯಾದುದರಿಂದ ಅದನ್ನೀಗ ಹೊಸ ಕಟ್ಟಡವಾಗಿ ಮಾಡಲು ಡಾ. ಸುರೇಶರಾಯರ ಮುಂದಾಳುತನದಲ್ಲಿ, ಎಲ್ಲರೂ ಸೊಂಟ ಕಟ್ಟಿ ನಿಂತಿದ್ದಾರೆ.

ಈಗ ಎರಡು ವರ್ಷಗಳ ಹಿಂದೆ, ಕಟ್ಟಡ ತಳಪಾಯವಾಗಿ ಈಗ ಕಟ್ಟಡ ನಾಲ್ಕು ಮಜಲು ಮೇಲೆದ್ದಿದೆ. ಇದೇ ಜೂನ್ 30, 2019 ಭಾನುವಾರ, ಶ್ರೀಕೃಷ್ಣ ಮಂದಿರದ ಶಿಲಾನ್ಯಾಸವನ್ನು ಅದ್ದೂರಿಯಿಂದ ಜರುಗಿಸಿದರು ಈ ದೇಗುಲ ಕೇವಲ ಬಿ.ಎಸ್.ಕೆ.ಬಿ.ಗೆ ಸೇರಿದ್ದಲ್ಲ, ಮುಂಬಯಿಯ ಎಲ್ಲಾ ಕನ್ನಡ ಜನತೆಗೆ ಸೇರಿದುದು ಎಂದ, ಡಾ. ಸುರೇಶರಾಯರು, ಎಲ್ಲಾ ಕನ್ನಡ ಸಂಘಗಳ ಪ್ರತಿನಿಧಿಗಳಿಂದ ತಳಹದಿಯ ಒಂದೊಂದು ಕಲ್ಲನ್ನೂ ಒಂದು ಗೂಡಿಸಿದರು.

ಆಮೇಲೆ ಪೇಜಾವರ ಮಠದ ಪೂಜ್ಯ ವಿಶ್ವೇಶತೀರ್ಥರವರು ತುಲಾ ಭಾರ ಮಾಡಿಕೊಂಡು, ಅದರಿಂದ ಬಂದ ಬೆಳ್ಳಿಯನ್ನೆಲ್ಲಾ ಶ್ರೀಕೃಷ್ಣನಿಗೆ ಸಮರ್ಪಣೆ ಮಾಡಿದರು. ಮುಂಬಯಿಯ ಎಂಟು ಕಡೆ ತುಲಾಭಾರದಿಂದರೂ. 1 ಕೋಟಿ ಕೂಡಿದ್ದು. ಈ ಸೇವೆಯ ಎಲ್ಲಾ ಕೀರ್ತಿಯೂ ಪೂಜ್ಯರಿಗೆ ಸೇರತಕ್ಕದ್ದು. ಭವ್ಯವಾದ ಈ ಕಟ್ಟಡದಲ್ಲಿ ಶೀಕೃಷ್ಣ ಮೂರ್ತಿ ಬೆಳಗುವುದು ಮಾತ್ರವಲ್ಲ, ಕಂಬ–ಕಂಬಕ್ಕೂ ಶಿಲಾಕಲ್ಪ ಮತ್ತು ದಶಾವತಾರ ಶಿಲ್ಪಗಳನ್ನು ಮೂಡಿಸಲಾಗುತ್ತದೆ. ಮೇಲಿನ ಮಜಲುಗಳಲ್ಲಿ, ಒಂದು 250 ಮಂದಿ ಕೂರುವಂತಹ ವಾತಾನುಕೂಲ ಇರುವ ಒಂದು ಸಭಾಗಾರ, ಅಂತೆಯೇ ಮೇಲಿನ ಮಜಲುಗಳಲ್ಲಿ, ಅಡಿಗೆ ಮನೆಗಳು, ಎಳೆಯರಿಗೆ ಆಟದ ಮನೆ, 25 ಕೋಣೆಗಳಷ್ಟು ಅತಿಥಿಗೃಹ ಇವೆಲ್ಲವೂ ನಿಯೋಜಿಸಲಾಗಿದೆ.

ಅಂದಿನ ಸಂಭ್ರಮದಲ್ಲಿ, ಮುಂಬಯಿಗೆ ಮುಂಬಯಿಯೇ ನೆರೆದಿದ್ದು, ಒಂದು ಜಾತ್ರೆಯ ನೆನಪಾಗುತ್ತಿತ್ತು. ಬಿ.ಎಸ್.ಕೆ.ಬಿ. ಆತಿಥ್ಯಕ್ಕೆ ಹೆಸರಾದ ಮಂದಿ. ಎಲ್ಲರಿಗೂ ಸವಿಯೂಟ ಕೂಡ. ಆದರೆ ಪೂಜ್ಯರ ಸವಿನುಡಿಗಳನ್ನು ಕೇಳಿದ ನಂತರ ಎಲ್ಲಾ ಹಸಿವೆಯೂ ಹಿಂಗಿ ಹೋಯಿತು.

ಡಾ. ಸುರೇಶರಾಯರು ಮತ್ತು ಬಿ.ಎಸ್.ಕೆ.ಬಿ ಸದಸ್ಯರಿಗೆ ನಮ್ಮೆಲ್ಲರ ತುಂಬೆದೆಯ ಹಾರೈಕೆಗಳು ಶ್ರೀಕೃಷ್ಣ ಬೇಗ ಮತ್ತೆ ತನ್ನ ಮನೆಗೆ ಹಿಂದಿರುಗಿ ನಲಿದಾಡಲಿ ಅವನೊಡನೆ ನಮ್ಮನ್ನೂ ನಲಿಸಲಿ.

Date of Publication : 5th of every month RNI No. 040015 / 83
Regd. No. MNE / 93 / 2018-20 Date of Posting:5/6th of every month
at Mumbai Patrika Channel Sorting Office G.P.O.

## ಹರಟೆ

**ಶನಿವಾರ ಜುಲೈ 27, 2019 ರಂದು 6:00 ಗಂಟೆಗೆ**

# ಹೆಣ್ಣು – ಗಂಡು

**ಪಾತ್ರ ಮತ್ತು ಕಾನೂನು ಸಮವಾಗಿದೆಯೇ?**

**WOMAN – MAN**

**Role & Laws, are they equitable?**

**ಎಲ್ಲರೂ ಚರ್ಚೆಗೆ ಅಣಿಯಾಗಿ ಬನ್ನಿ.**

**ನಿಮ್ಮ ಮಾತಿನಿಂದ ಬೆಳಕು ಚೆಲ್ಲಲಿ – ಸದ್ದು ನಿಲ್ಲಲಿ.**

## ಪಾಕ ಮಂಟಪ : ಪಾವ್ ಭಾಜಿ



ಮುಂಚಿನ ದಿನ ರಾತ್ರಿ ಒಂದು ಮುಷ್ಠಿ ಹಸಿರು ಬಟಾಣಿ ನೀರಲ್ಲಿ ನೆನಸಿಟ್ಟು ಕೊಳ್ಳಬೇಕು. (ಹಸಿ ಬಟಾಣಿಯಾಗಿದ್ದರೆ ರುಚಿ ಜಾಸ್ತಿ, ಮತ್ತೆ ನೆನೆಸಿಡಬೇಕಾಗಿಲ್ಲ). ಸಿಪ್ಪೆ ತೆಗೆದು ಶುಚಿ ಮಾಡಿ ನಾಲ್ಕು ಭಾಗ ಮಾಡಿಟ್ಟುಕೊಂಡ ನಾಲ್ಕು ಆಲೂಗೆಡ್ಡೆ, ಸಣ್ಣಗೆ ಹಚ್ಚಿದ ಸಣ್ಣಕಪ್‌ನಷ್ಟು ಕ್ಯಾರೆಟ್ ಹೋಳುಗಳು ಹಾಗೂ ನೆನೆಸಿಟ್ಟ ಬಟಾಣಿ ಕಾಳುಗಳನ್ನು ಕುಕ್ಕರಿನಲ್ಲಿ ಚೆನ್ನಾಗಿ ಬೇಯಿಸಿಟ್ಟುಕೊಳ್ಳಬೇಕು. ಕತ್ತರಿಸಿದ ಎರಡು ಈರುಳ್ಳಿ, ಎರಡು ಟೊಮ್ಯಾಟೊ ಹಾಗೂ ಸಣ್ಣತುಂಡು ಶುಂಠಿ, ನಾಲ್ಕು ಎಸಳು ಬೆಳ್ಳುಳ್ಳಿ ಇವೆಲ್ಲವನ್ನೂ ಒಂದು ಸಲ ಮಿಕ್ಸಿಯಲ್ಲಿಗರ್ ಎನಿಸಿಕೊಂಡು ಪೇಸ್ಟ್‌ತರ ಮಾಡಿಟ್ಟುಕೊಳ್ಳಬೇಕು. ನಂತರದೊಡ್ಡ ಬಾಣಲೆಯಲ್ಲಿ ಒಂದು ಸಣ್ಣಗಾತ್ರದ ದೊಣ್ಣೆ ಮೆಣಸಿನಕಾಯಿ ಹಾಗೂ ಒಂದು ದೊಡ್ಡ ಈರುಳ್ಳಿಯನ್ನು ಸಣ್ಣಗೆ ಹಚ್ಚಿ ಸ್ವಲ್ಪ ಎಣ್ಣೆ ಹಾಗೂ ತುಪ್ಪ ಹಾಕಿ ಹುರಿಯುತ್ತಾ ಮಿಕ್ಸಿಯಲ್ಲಿ ರುಬ್ಬಿದ ಮಿಶ್ರಣ ಕುದಿಯಲು ಇಡಬೇಕು.

ಕುದಿಯುತ್ತಿರುವಾಗ ಅದಕ್ಕೆ ಎರಡು ಚಮಚ ಎಂ.ಟಿ.ಆರ್. ಪಾವ್ ಭಾಜಿ ಮಸಾಲ ಪೌಡರ್, ರುಚಿಗೆ ತಕ್ಕಷ್ಟು ಉಪ್ಪು ಹಾಗೂ ಒಂದು ಸಣ್ಣ ಚಮಚ ಸಕ್ಕರೆ ಹಾಕಬೇಕು. ನಂತರ ಕುಕ್ಕರಿನಲ್ಲಿ ಬೇಯಿಸಿಟ್ಟ ಪದಾರ್ಥಗಳನ್ನು ಸ್ಮಾಶ್ (ಮುದ್ದೆ) ಮಾಡಿ ಎಷ್ಟು ಬೇಕೋ ಅಷ್ಟು ನೀರು ಸೇರಿಸಿ ಒಂದೆರಡು ಸಲ ಸೌಟ್‌ನಲ್ಲಿ ಕಾಡಿ ಪುನಃ ಕುದಿಯಲು ಬಿಡಬೇಕು. ಎಲ್ಲವೂ ಒಂದಿಗೆ ಆದಾಗ ಅದಕ್ಕೆ ಎರಡು ಚಮಚ ಬೆಣ್ಣೆ ಅಥವಾ ತುಪ್ಪ ಹಾಗೂ ಕೊತ್ತಂಬರಿ ಸೊಪ್ಪು ಹಾಕಬೇಕು. ತಿನ್ನುವಾಗ ಸಣ್ಣಗೆ ಹಚ್ಚಿದ ಈರುಳ್ಳಿ, ಕೊತ್ತಂಬರಿ ಸೊಪ್ಪು ಹಾಗೂ ನಿಂಬೆ ಇದ್ದಲ್ಲಿ ಇನ್ನೂ ರುಚಿ. ಈ ಭಾಜಿಯು ತುಪ್ಪ ಹಾಕಿ ಕಾಸಿದ ಪಾವ್‌ನೊಂದಿಗೆ, ಚಪಾತಿಯೊಂದಿಗೆ ಹಾಗೂ ಪೂರಿ ಅಥವಾ ನಾನ್, ಪರಾಟದೊಂದಿಗೂ ಬಲು ರುಚಿ.



– **ಪೂರ್ಣಿಮಾ ಜನಾರ್ದನ್**

Edited, Printed & Published by Dr. Girija Shastri, On behalf of the Mysore Association, Mumbai. Tel.: 2402 4647, 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361